# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 303 Issue: 303 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 12.06.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2








ಹಂಪಿ ಟೈಮ್ಸ್
ಸುದ್ದಿ–ಜಾಹೀರಾತಿಗಾಗಿ
ಸಂಪರ್ಕಿಸಿ:
ಕಚೇರಿ ವಿಳಾಸ:
ವಾಲ್ಮೀಕಿ ಸರ್ಕಲ್ ಹತ್ತಿರ, ಬಂಬೂ ಬಜಾರ್, ಹೊಸಪೇಟೆ–583201
ವಿಜಯನಗರ ಜಿಲ್ಲೆ
ಮೊ: 9448633038
hampitimes@gmail.com
visit for Daily updates
epaper.hampitimes.com


# ಹೆಚ್ಚಿದ ಕಾಡು ಪ್ರಾಣಿಗಳ ಉಪಟಳ ಬಿತ್ತನೆ ನಾಶ, ಕಣ್ಣೀರಿಟ್ಟ ರೈತರು

## ಅರಣ್ಯ ಇಲಾಖಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು | ಸೂಕ್ತ ಪರಿಹಾರ ನೀಡಬೇಕೆಂದು ರೈತರು ಒತ್ತಾಯ

**ಹಂಪಿ ಟೈಮ್ಸ್ ಕೊಟ್ಟೂರು**

ಈಗಾಗಲೇ ಅತಿವೃಷ್ಟಿ, ಅನಾವೃಷ್ಟಿಯಿಂದ ಕಂಗಾಲಾಗಿರುವ ರೈತರಿಗೆ ಇದೀಗ ಕಾಡು ಹಂದಿಗಳ ಉಪಟಳವು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೊಟ್ಟೂರು ತಾಲೂಕಿನ ನಿಂಬಳಗೇರೆ ಗ್ರಾಮದ ರೈತರಾದ ಬಾರಿ ಕೊಟ್ರೇಶಪ್ಪ, ಎಂ.ರಾಜಪ್ಪ, ಕರಿಯಣ್ಣರ ಕಲ್ಲೇಶ್, ಬಿ.ಶೇಖರಪ್ಪ, ನೀಲಪ್ಪ ಸೇರಿದಂತೆ ಇನ್ನಿತರ ರೈತರು ಬಿತ್ತನೆ ಮಾಡಿದ್ದ ಮೆಕ್ಕೆಜೋಳದ ಬೆಳೆಯನ್ನು ಕಾಡು ಹಂದಿಗಳು ಭಾಗಶಃ ತಿಂದು ನಾಶಪಡಿಸಿರುವದದನ್ನು ಕಂಡ ಬಡ ರೈತರು ಸಾಲಕ್ಕೆ ಹೆದರಿ ಕಣ್ಣೀರಿಟ್ಟಿದ್ದಾರೆ.

ಮಳೆ ಸುರಿದ ಬೆನ್ನಲ್ಲೆ ಹೊವನ್ನು ಹದಗೊಳಿಸಿ ಸಾಲ ಮಾಡಿ ಮೆಕ್ಕೆಜೋಳವನ್ನು ಬಿತ್ತನೆ ಮಾಡಿದ್ದರು. ಉತ್ತಮ ಮಳೆಯಾಗುತ್ತಿರುವುದರಿಂದ ಉತ್ತಮ ಫಸಲು ಕನಸು ಕಂಡಿದ್ದ ರೈತರಿಗೆ ಕಾಡು ಹಂದಿಗಳ ದಾಳಿ ತೀವ್ರ ಆಘಾತ ನೀಡಿದೆ. ರಾತ್ರಿಯಿಡೀ ಹೊಲಕ್ಕೆ ನುಗ್ಗಿದ ಕಾಡು ಹಂದಿಗಳ ಹಿಂಡು, ಬಿತ್ತಿದ ಮೆಕ್ಕೆಜೋಳ ಬೀಜಗಳನ್ನೆ ಕೆದಕಿ ತಿಂದು ಹಾಕಿದ್ದು, ರೈತರಿಗೆ ಭಾರಿ ನಷ್ಟ ಉಂಟಾಗಿ, ಆರ್ಥಿಕ ಸಂಕಷ್ಟ ಅನುಭವಿಸುವಂತಾಗಿದೆ.

"ಸಾಲ ಮಾಡಿ ಬೀಜ, ಗೊಬ್ಬರ ತಂದು ಬಿತ್ತನೆ ಮಾಡಿದ್ದೇವೆ. ಕೃಷಿಯನ್ನೇ ನಂಬಿ ಜೀವನ ನಡೆಸಬೇಕಿತ್ತು. ಆದರೆ, ಕಾಡು ಹಂದಿಗಳು ಎಲ್ಲವನ್ನೂ ನಾಶ ಮಾಡಿವೆ. ಈಗ ಹೇಗೆ ಬದುಕುವುದು ಎಂದು ಗೊತ್ತಾಗುತ್ತಿಲ್ಲ," ಬೀಜಗೊಬ್ಬರ ದಂಗಡಿ ಮಾಲಿಕರು ಒಮ್ಮೆ ಸಾಲ ಕೊಡಕೆ ಇಂದು ಮುಂದು ಯೋಚಿಸುತ್ತಿದ್ದಾರೆ. ಮತ್ತೊಮ್ಮೆ ಸಾಲ ಕೆಳಕೋದ್ರೆ, ಸಾಲ ಕೊಡುವುದು ಖಚಿತವಿಲ್ಲ .ಈ ಸ್ಥಿತಿಯಲ್ಲಿ ಮರು ಬಿತ್ತನೆ ಬಗ್ಗೆ ಚಿಂತೆಯಾಗಿದೆ ಎಂದು ರೈತರು ಕಣ್ಣೀರಿಟ್ಟು ತಮ್ಮ ಅಳಲು ತೋಡಿಕೊಂಡರು.



> ನಿಂಬಳಗೇರಿ ಗ್ರಾಮ ಮಾತ್ರವಲ್ಲ ತಾಲೂಕಿನಲ್ಲಿ ಕಾಡು ಹಂದಿಗಳು ಹೆಚ್ಚಾಗಿದ್ದು, ದಾಳಿಗಳಿಂದ ಬಿತ್ತನೆ ಮಾಡುವ ರೈತರಿಗೆ ನೆಮ್ಮದಿಯಿಲ್ಲದಂತಾಗಿದೆ, ಅರಣ್ಯಾಧಿಕಾರಿಗಳು ಶೀಘ್ರ ಕಾಡು ಹಂದಿಗಳನ್ನು ನಿಯಂತ್ರಿಸಿ ರೈತರಿಗಾಗುವಂತ ನಷ್ಟ ತಪ್ಪಿಸಬೇಕು. ಸರ್ಕಾರ ಕೂಡಲೇ ಇತ್ತ ಗಮನಹರಿಸಿ, ರೈತರ ನೆರವಿಗೆ ಧಾವಿಸಬೇಕು.
>
> – ಕೊಟ್ರೇಶಪ್ಪ, ರೈತ, ಕೊಟ್ಟೂರು

ಕಳೆದ ಕೆಲವು ದಿನಗಳಿಂದ ಈ ಭಾಗದಲ್ಲಿ ಕಾಡು ಹಂದಿಗಳ ಉಪಟಳ ಹೆಚ್ಚಾಗಿದೆ. ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಜಮೀನುಗಳಲ್ಲಿ ಕಾಡು ಹಂದಿಗಳು ನುಗ್ಗಿ ಬೆಳೆಗಳನ್ನು ನಾಶಪಡಿಸುತ್ತಿವೆ. ಇದರಿಂದ ರೈತರು ಆತಂಕಗೊಂಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಹಾನಿಗೊಳಗಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

**ಮೈಕ್ರೋ ನ್ಯೂಸ್**

### ಜೂ.14 ರಂದು ರಕ್ತದಾನಿಗಳ ದಿನಾಚರಣೆ: ಜಾಗೃತಿ ಜಾಥ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಮಟ್ಟದ ವಿಶ್ವ ರಕ್ತದಾನಿಗಳ ದಿನಾಚರಣೆಯನ್ನು ಜೂ.14 ರಂದು ನೂರು ಹಾಸಿಗೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿಶ್ವ ರಕ್ತ ದಿನಾಚರಣೆ ನಿಮಿತ್ತ ಜಾಗೃತಿ ಜಾಥವನ್ನು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಿಂದ, ಗಾಂಧಿ ಚೌಕ್, ಶಾನಭಾಗ ಸರ್ಕಲ್, ಅಂಬೇಡ್ಕರ್ ಸರ್ಕಲ್, ವಿಜಯನಗರ ಕಾಲೇಜಿನ ಮುಂಭಾಗದ ಮೂಲಕ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯವರೆಗೆ ಜಾಗೃತಿ ಜಾಥಾವನ್ನು ನಡೆಸಲಾಗುತ್ತದೆ ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನ ಅಧಿಕಾರಿಗಳಾದ ಡಾ.ಭಾಸ್ಕರ್ ತಿಳಿಸಿದ್ದಾರೆ.

**ಆಧುನಿಕ ಸೌಲಭ್ಯ, ಅನುಭವಿ ಶಿಕ್ಷಕರು – ಸರ್ಕಾರಿ ಶಾಲೆಗಳಲ್ಲಿ ನಿಮ್ಮ ಮಗುವಿಗೆ ಉತ್ತಮ ಶಿಕ್ಷಣ**
(Modern facilities, experienced teachers - good education for your child in government schools.)




# ವಿಧಾನಸೌಧದಲ್ಲಿ ನಡೆದ RCB ಆಟಗಾರರ ಸನ್ಮಾನ ಸಮಾರಂಭಕ್ಕೆ ರಾಜ್ಯಪಾಲರನ್ನು ನಾನೇ ಆಹ್ವಾನಿಸಿದ್ದೆ: ಸಿಎಂ ಸಿದ್ದರಾಮಯ್ಯ

**ಗೌರಿಬಿದನೂರು:** ವಿಧಾನಸೌಧದ ಮೆಟ್ಟಿಲುಗಳ ಮೇಲೆ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ರಾಜ್ಯಪಾಲರು ಅವರಾಗೇ ಬರಲಿಲ್ಲ, ನಾನೇ ಆಹ್ವಾನಿಸಿದ್ದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.

ಅವರು ಬುಧವಾರ ಗೌರಿಬಿದನೂರಿನಲಗಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

**ರಾಜ್ಯಪಾಲರು ತಾವಾಗಿಯೇ ಬರಲಿಲ್ಲ: ಆಹ್ವಾನ ನೀಡಲಾಗಿತ್ತು.**



ಜೂನ್ 4 ರಂದು ಕರ್ನಾಟಕ ಕ್ರಿಕೆಟ್ ಸಂಸ್ಥೆ ಹಾಗೂ ಆರ್.ಸಿ. ಬಿ ಯ ವತಿಯಿಂದ ಆರ್.ಸಿ. ಬಿ ಆಟಗಾರರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ನನಗೆ ಅಂದು ಬೆಳಿಗ್ಗೆ 11.29 ನಿಮಿಷಕ್ಕೆ ಕೆ.ಎಸ್.ಸಿ.ಎ ವತಿಯಿಂದ ಶಂಕರ್ ಮತ್ತು ಜಯರಾಮ್ ಅವರು ಆಹ್ವಾನ ನೀಡಿ ಮನವಿ ಮಾಡಿಕೊಂಡರು. ಇದಕ್ಕೆ ನಾನು ಒಪ್ಪಿಗೆ ನೀಡಿದೆ. ಬಳಿಕ ಅವರು ರಾಜ್ಯಪಾಲರನ್ನು ಆಹ್ವಾನ ಮಾಡಿರುವುದಾಗಿ ತಿಳಿಸಿದರು. ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ರಾಜ್ಯಪಾಲರು ಅವರಾಗಿಯೇ ಬಂದಿದ್ದರು ಎಂದು ಪ್ರಾಚಾರವಾಗಿದ್ದು ಅದು ತಪ್ಪು. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಆಗಿದ್ದ ಗೋವಿಂದರಾಜು ಅವರು ರಾಜ್ಯಪಾಲರಿಗೆ ಕರೆ ಮಾಡಿ ಫೋನ್ ನನಗೆ ಕೊಟ್ಟರು. ಆಗ ನಾನು ಕೂಡ ಕಾರ್ಯಕ್ರಮಕ್ಕೆ ತೆರಳುತ್ತಿದ್ದು ನೀವು ಬನ್ನಿ ಎಂದು ಆಹ್ವಾನಿಸಿದೆ. ರಾಜ್ಯಪಾಲರು ಕೂಡ ಕಾರ್ಯಕ್ರಮಕ್ಕೆ ಆಗಮಿಸಿದರು. ಸನ್ಮಾನ ಕಾರ್ಯಕ್ರಮ 20 ನಿಮಿಷಗಳಲ್ಲಿ ಮುಗಿದುಹೋಯಿತು. ಮಾಧ್ಯಮಗಳು ಹಾಗೂ ಸುದ್ದಿ ವಾಹಿನಿಗಳಲ್ಲಿ ರಾಜ್ಯಪಾಲರು ತಾವಾಗಿಯೇ ಬಂದಿದ್ದಾರೆ ಎಂದು ವರದಿಯಾದ್ದರಿಂದ ಸ್ಪಷ್ಟೀಕರಣ ನೀಡುತ್ತಿದ್ದೇನೆ ಎಂದರು.

**ಪರಿಹಾರ ನೀಡಲಾಗಿದೆ:** ಕಾಲ್ತುಳಿತದಲ್ಲಿ ಮಾಡಿದವರ ಕುಟುಂಬಕ್ಕೆ ತಲಾ 25 ಲಕ್ಷ ರೂ.ಗಳನ್ನೂ ಈಗಾಗಲೇ ಪಾವತಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ಕನ್ನಡದ ಅಭಿವೃದ್ಧಿಗೆ ಅನುದಾನ ಲಭ್ಯವಿದೆ:** ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನದ ಅಗತ್ಯವಿದ್ದರೆ ಅನುದಾನ ಒದಗಿಸಲಾಗುವುದು. ಕನ್ನಡದ ಅಭಿವೃದ್ಧಿಗೆ ಯಾವುದೇ ಕಾರಣಕ್ಕೂ ಅನುದಾನವಿಲ್ಲ ಎಂದು ಹೇಳುವುದಿಲ್ಲ ಎಂದರು.

**ವಿಧಾನ ಪರಿಷತ್ ಸದಸ್ಯರ ನಾಮ ನಿರ್ದೇಶನದ ವಿಚಾರದಲ್ಲಿ ಯಾವುದೇ ಗೊಂದಲಗಳಿಲ್ಲ:** ವಿಧಾನ ಪರಿಷತ್ ಸದಸ್ಯರ ನಾಮ ನಿರ್ದೇಶನದ ವಿಚಾರದಲ್ಲಿ ಯಾವುದೇ ಗೊಂದಲಗಳಿಲ್ಲ. ಈ ವಿಚಾರದ ಬಗ್ಗೆ ಚರ್ಚೆ ಮಾಡಬೇಕಿದ್ದು ಅದನ್ನು ಮುಂದಕ್ಕೆ ಹಾಕಿದ್ದೇವೆ ಎಂದರು.

**ಹೊಸ ಜಿಲ್ಲೆ ರಚನೆ–ಚರ್ಚಿಸಿ ತೀರ್ಮಾನ:** ಬೆಳಗಾವಿಯಲ್ಲಿ ಮಾತ್ರ ಹೊಸ ಜಿಲ್ಲೆ ರಚಿಸುವ ಬಗ್ಗೆ ಬೇಡಿಕೆ ಇದ್ದು, ಇದಕ್ಕೆ ಸಂಬಂಧಿಸಿದಂತೆ ಶಾಸಕರು, ಸಚಿವರು ಮಾತು ಸಂಸದರ ಸಭೆಯನ್ನು ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

**ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ :** ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಯಲಿರುವುದು ಈ ಭಾಗದ ಜನರಲ್ಲಿ ನಿರೀಕ್ಷೆ ಹುಟ್ಟುಹಾಕಿದೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ 19 ರಂದು ಸಚಿವ ಸಂಪುಟ ನಡೆಯುತ್ತಿದೆ. ಅಲ್ಲಿ ಪ್ರಸ್ತಾಪವಾಗುವ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದರು.

**ಮಾವಿಗೆ ಬೆಂಬಲ ಬೆಲೆ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ:** ಮಾವಿನ ಬೆಲೆ ಕುಸಿತದ ಬೆಂಬಲ ಬೆಲೆ ನೀಡುವ ಬಗ್ಗೆ ಮಾತನಾಡಿ ಆಂಧ್ರದಲ್ಲಿ ತೋತಾಪುರಿ ಮಾವಿಗೆ ಒಂದು ಕೆಜಿ ಗೆ 4 ರೂ. ನೀಡಲಾಗುತ್ತಿದ್ದು, ಇಲ್ಲಿಯೂ ಕೊಡಬೇಕು ಎನ್ನುವ ಬೇಡಿಕೆಯನ್ನು ಸಚಿವ ಎಂ.ಸಿ.ಸುಧಾಕರ್ ಅವರು ಮಾಡಿದ್ದು, ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಲಾಗುವುದು ಎಂದರು.

# ಸಾತ್ವಿಕತೆಯೇ ಮೈವೆತ್ತ ಸಜ್ಜನ ದಂಪತಿಗಳು ದೇವರ ದಾಸಿಮಯ್ಯ ಮತ್ತು ದುಗ್ಗಳೆ

ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ" ಎಂದು ವಚನವನ್ನು ರಚಿಸಿದ ದೇವರ ದಾಸಿಮಯ್ಯ ಮತ್ತು ದುಗ್ಗಳೆ ದಂಪತಿಗಳು ಬಸವಣ್ಣನವರಿಗಿಂತ ನೂರು ವರ್ಷ ಮುಂಚೆಯೇ ಜನಿಸಿರಬಹುದು ಎಂಬ ಉಲ್ಲೇಖಗಳು ದೊರೆತಿರುವ ಕಾರಣ ದೇವರ ದಾಸಿಮಯ್ಯನವರ ಕಾಲವನ್ನು ಕ್ರಿ. ಶ. 1140 ಇರಬಹುದು ಎಂದು ಊಹಿಸಲಾಗಿದೆ. 176 ವಚನಗಳನ್ನು ರಾಮನಾಥ ಎಂಬ ಅಂಕಿತನಾಮದಲ್ಲಿ ಬರೆದಿರುವ ದೇವರ ದಾಸಿಮಯ್ಯನವರು ಕಾಯಕ, ದಾಸೋಹ ಮತ್ತು ಗುರು,ಲಿಂಗ, ಜಂಗಮದಲ್ಲಿ ನಂಬಿಕೆಯನ್ನು ಇಟ್ಟವರು. ಆದ್ಯ ವಚನಕಾರ ಎಂದೇ ಹೆಸರಾದ ದೇವರ ದಾಸಿಮಯ್ಯನವರು ಅತ್ಯಂತ ಸೌಮ್ಯ ಆದರೆ ಅಷ್ಟೇ ವಾಸ್ತವವಾದಿಯಾಗಿದ್ದರು. ದೇವಾಂಗ ಜನಾಂಗದ ದೇವಲನ ಏಳನೇ ಅವತಾರವೇ ಜೇಡರ ದಾಸಿಮಯ್ಯ ಎಂದು ಕೂಡ ಹೇಳುತ್ತಾರೆ.

ದಾಸ, ದಾಸಯ್ಯ, ದಾಸಿದೇವ, ದೇವದಾಸ, ದೇವರ ದಾಸಿಮಯ್ಯ ದಾನಮಾರ್ಯ, ಜೇಡರ ದಾಸಿಮಯ್ಯ ಎಂಬ ಹತ್ತು ಹಲವಾರು ಹೆಸರುಗಳಿಂದ ಕರೆಯಲ್ಪಡುವ ಏಕೈಕ ವ್ಯಕ್ತಿ ದಾಸಿಮಯ್ಯ ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದೇನೂರು ಗ್ರಾಮದಲ್ಲಿ ನೇಕಾರ ವೃತ್ತಿಯನ್ನು ಮಾಡುತ್ತಿದ್ದ ತಂದೆ ಕಾಮಯ್ಯ ಮತ್ತು ತಾಯಿ ಶಂಕರಿ ದಂಪತಿಗಳ ಪುಣ್ಯ ಗರ್ಭದಲ್ಲಿ ಜನಿಸಿದರು. ಮುದೇನೂರು ರಾಮತೀರ್ಥ, ಲಕ್ಷ್ಮಣತೀರ್ಥ, ಸಕ್ಕರೆ ತೀರ್ಥ, ಮರಳು ತೀರ್ಥ, ಪಾಂಡವ ತೀರ್ಥ, ಹಾಲು ತೀರ್ಥ ಮತ್ತು ಸಂಗಮ ತೀರ್ಥ ಎಂಬ ಒಟ್ಟು ಏಳು ತೀರ್ಥ ಸ್ಥಾನಗಳಿರುವ ಪವಿತ್ರ ಗ್ರಾಮವಾಗಿತ್ತು.

ಓದು ಬರಹಗಳಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ ದಾಸಿಮಯ್ಯನವರು ಶ್ರೀಶೈಲದ ಚಂದ್ರಗುಂಡ ಶಿವಾಚಾರ್ಯರ ಬಳಿ ಹನ್ನೆರಡು ವರ್ಷಗಳ ಕಾಲ ಅಧ್ಯಯನಗೈದರು. ಎಲ್ಲ ರೀತಿಯ ವಿದ್ಯೆಗಳನ್ನು ಕಲಿತ ನಂತರ ಮರಳಿ ತನ್ನೂರಿಗೆ ಹೋಗಿ ಕುಲದ ವೃತ್ತಿಯಾದ ನೇಕಾರಿಕೆಯನ್ನು ಕೈಗೊಳ್ಳಬೇಕೆಂದು ಆಶಿಸಿದ ದಾಸಿಮಯ್ಯ ಶ್ರೀಶೈಲದಿಂದ ಮರಳಿ ಬರುವಾಗ ಮಾರ್ಗ ಮಧ್ಯದಲ್ಲಿ ಗೌಡಗೇರಿ ಎಂಬ ಗ್ರಾಮದಲ್ಲಿ ತಂಗಿದರು. ಆ ಗ್ರಾಮದ ಗೌಡಕ್ಕೆ ಮನೆತನದ ಮುದ್ದಯ್ಯಗೌಡ ಎಂಬ ರೈತರು ಇಷ್ಟೆಲ್ಲಾ ಶ್ರೀಮಂತಿಕೆ ಇದ್ದರೂ ನನಗೆ ನೆಮ್ಮದಿ ಇಲ್ಲ ಇದು ಕೇವಲ ನನ್ನೊಬ್ಬನ ಸಮಸ್ಯೆಯಲ್ಲ. ನನ್ನ ಊರಿನ ಎಲ್ಲ ಜನರು ಕೂಡ ಇದೇ ತೊಂದರೆಯಿಂದ ಬಳಲುತ್ತಿದ್ದಾರೆ.. ನಮ್ಮೆಲ್ಲ ರಿಗೂ ಮಾರ್ಗದರ್ಶನ ನೀಡಿ ಎಂದು ಹೇಳಿದಾಗ ದಾಸಿಮಯ್ಯನವರು



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

**ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ**
**ಸುಳಿದು ಬೀಸುವ ಗಾಳಿ ನಿಮ್ಮ ದಾನ**
**ನಿಮ್ಮ ದಾನವನ್ನುಂಡು ಅನ್ಯರ ಹೊಗಳುವ**
**ಕುನ್ನಿಗಳನೇನೆಂಬೆ ರಾಮನಾಥ**



ಎಂದು ಅವರಿಗೆಲ್ಲ ವಚನದ ಮೂಲಕ ತಿಳಿಹೇಳಿದರು. ಮತ್ತೆ ಮರಳಿ ತನ್ನೂರಿಗೆ ತೆರಳಿ ನೇಕಾರಿಕೆ ವೃತ್ತಿಯನ್ನು ಅವಲಂಬಿಸಿದ ದಾಸಿಮಯ್ಯನವರು ವಿವಾಹವಾಗಲು 12 ವರ್ಷಗಳ ಕಾಲ ಕನ್ಯಾನ್ವೇಷಣೆಗೆ ತೊಡಗಿದ್ದರು.

ತಮ್ಮನ್ನು ವಿವಾಹವಾಗುವ ಕನ್ಯೆಗೆ ಅವರು ಕಬ್ಬಿನ ಜಲ್ಲೆ ಮರಳು ಮತ್ತು ಅಕ್ಕಿಯನ್ನು ಉಪಯೋಗಿಸಿ ಕಟ್ಟಿಗೆ ಮತ್ತು ನೀರು ಇಲ್ಲದೆ ಪಾಯಸ ಮಾಡಿ ಕೊಡುವ ಶರತ್ತನ್ನು ವಿಧಿಸುತ್ತಿದ್ದರು. ಅದು ಹೇಗೆ ಸಾಧ್ಯ ಎಂದೇ ಸಾಕಷ್ಟು ಜನ ಕನ್ಯೆಯರು ಮತ್ತು ಅವರ ಪಾಲಕರು ಹಿಂಜರಿಯುತ್ತಿದ್ದರು.

ಅಂತಿಮವಾಗಿ ಕಲ್ಬುರ್ಗಿ ಜಿಲ್ಲೆಯ ಅಫ್ಜಲ ಪುರ ತಾಲೂಕಿನ ಗೊಬ್ಬೂರು ಗ್ರಾಮದ ಮಹಾದೇವಿ ಮತ್ತು ಮಲ್ಲಿನಾಥ ದಂಪತಿಗಳ ಮನೆಗೆ ಬಂದು ಕನ್ಯೆಯ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದರು. ದಾಸಿಮಯ್ಯನ ಷರತ್ತನ್ನು ಸ್ವೀಕರಿಸಿದ ಆಕೆ ಕಬ್ಬಿನ ಜಲ್ಲೆಯಿಂದ ರಸವನ್ನು ತೆಗೆದು ಆ ರಸವನ್ನು ತೆಗೆದ ಸಿಪ್ಪೆಯನ್ನು ಒಣಗಿಸಿ ಅದನ್ನು ಉರಿ ಮಾಡಿ ಕಬ್ಬಿನ ರಸವನ್ನು ಪಾತ್ರೆ ಒಂದರಲ್ಲಿ ಹಾಕಿ ಅದರಲ್ಲಿ ಮರಳು ಮಿಶ್ರಿತ ಅಕ್ಕಿಯನ್ನು ಹಾಕಿದಾಗ ಭಾರವಾದ ಮರಳು ತಳಕ್ಕೆ ಸೇರಿ ಅಕ್ಕಿ ಸಿಹಿಯಾದ ಕಬ್ಬಿನ ರಸದಲ್ಲಿ ಕುದ್ದು ಪಾಯಸದ ರೂಪವನ್ನು ತಾಳಿತು. ಪಾತ್ರೆಯ ಮೇಲೆ ಮೆಲುವಾಗಿ ಸೌಟಿನಿಂದ ಅಕ್ಕಿಯ ಪಾಯಸವನ್ನು ಬಟ್ಟಲಲ್ಲಿ ತೆಗೆದು ಹಾಕಿದ ದುಗ್ಗಳೆ ಅದನ್ನು ತಂದು ದಾಸಿಮಯ್ಯನವರ ಮುಂದೆ ಇಟ್ಟಳು. ಇದರಿಂದ ಸಂತುಷ್ಟರಾದ ದಾಸಿಮಯ್ಯನವರು ಗುರು ಹಿರಿಯರ ಸಮ್ಮುಖದಲ್ಲಿ ದುಗ್ಗಳೆಯನ್ನು ವಿವಾಹವಾದರು. ವಿವಾಹದ ನಂತರ ಸತಿಪತಿಗಳು ಮುದೇನೂರು ಗ್ರಾಮದಲ್ಲಿ ಅತ್ಯಂತ ಅನ್ಯೋನ್ಯತೆಯಿಂದ ಬದುಕನ್ನು ಸಾಗಿಸಿದರು.

ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಸತಿಪತಿಗಳೊಂದಾಗದವರ ಭಕ್ತಿ ಅಮೃತದೊಳು ವಿಷ ಬೆರೆಸಿದಂತೆ ಕಾಣಾ ರಾಮನಾಥ ಎಂದು ಅನನ್ಯ ದಾಂಪತ್ಯದ ಕುರಿತು ವಚನವನ್ನು ರಚಿಸಿರುವ ದಾಸಿಮಯ್ಯನವರು ಪತ್ನಿ ದುಗ್ಗಳೆಯ ವಿನಮ್ರತೆಯ ಕುರಿತು ಹೀಗೆ ಬರೆದಿದ್ದಾರೆ

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರೆಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ

ಎಂದು ಆಕೆಯ ಮಿತವ್ಯಯ, ಪತಿಭಕ್ತಿ, ಸೌಮ್ಯ ಮತ್ತು ಸಾತ್ವಿಕತೆಯ ಕುರಿತು, ಕುರಿತು ಆತ ಹೇಳುತ್ತಾನೆ.

ಸುಮಾರು 12 ವರ್ಷಗಳ ಕಾಲ ನೇಯ್ದ ಅತ್ಯಂತ ಸುಂದರವಾದ ದಿವ್ಯಾಂಬರವನ್ನು ಮಾರುಕಟ್ಟೆಗೆ ಕೊಂಡು ಹೋದಾಗ ಅದರ ಸೌಂದರ್ಯ ಮತ್ತು ನೇಯ್ಗೆಯನ್ನು ಕಂಡ ಅದನ್ನು ಖರೀದಿಸಲು ಯಾರೂ ಮುಂದಾಗುವುದಿಲ್ಲ..... ಮಾರಾಟವಾಗದ ಅಂಬರವನ್ನು ಮರಳಿ ಮನೆಗೆ ತರುವಾಗ ದಾರಿಯಲ್ಲಿ ಕಂಡ ಮುಪ್ಪಿನ ಮುದುಕ ಚಳಿಯಿಂದ ನಡುಗುತ್ತಿದ್ದು ಇದನ್ನು ಕಂಡು ಆತನಿಗೆ ದಾಸಿಮಯ್ಯನವರು ಆ ದಿವ್ಯಾಂಬರವನ್ನು ನೀಡುತ್ತಾರೆ. ಆದರೆ ಆ ಮುಪ್ಪಿನ ಮುದುಕ ತನಗೆ ನೀಡಿದ ಆ ಬಟ್ಟೆಯನ್ನು ಹರಿದು ಚೂರು ಚೂರು ಮಾಡಿ ತಲೆಗೆ ಮತ್ತು ಸೊಂಟಕ್ಕೆ ಸುತ್ತಿಕೊಳ್ಳುತ್ತಾನೆ. ಇದನ್ನು ನೋಡಿ ದಾಸಿಮಯ್ಯನ ಜೊತೆಗಿದ್ದವರು ಇಷ್ಟು ಸುಂದರವಾಗಿ ನೀನು ನೇಯ್ದ ಬಟ್ಟೆಯನ್ನು ಆ ಮುದುಕ ಹರಿದು ಹಾಕಿದ. ನಿನಗೆ ಸ್ವಲ್ಪವೂ ಬೇಸರವಾಗಲಿಲ್ಲವೇ? ಎಂದು ಕೇಳಿದ. ಅದಕ್ಕೆ ಮುಗುಳ್ನಗುತ್ತಾ ನಾನು ಕೊಡುವವರೆಗೆ ಅದು ನನ್ನದಿತ್ತು.... ಆದರೆ ಆ ಮುದುಕನಿಗೆ ದಿವ್ಯಾಂಬರವನ್ನು ಕೊಟ್ಟ ಮೇಲೆ ಅದರ ಮೇಲೆ ನನಗೆ ಯಾವುದೇ ಅಧಿಕಾರವಿಲ್ಲ ಅದು ಪಡೆದುಕೊಂಡವನ ಸೊತ್ತು. ಅವನು ಅದನ್ನು ಏನು ಮಾಡಿದರೂ ನನಗೆ ಬಾಧಿಸುವುದಿಲ್ಲ ಎಂದು ಹೇಳಿದ. ನಂತರ ಕೋಪದಿಂದ ಮುಸುಗರೆದ ಮುದುಕನಿಗೆ ಹಸಿವಾಗಿರಬಹುದು ಎಂದು ಭಾವಿಸಿ ಆತನಿಗೆ ಬನ್ನಿ ನಮ್ಮ ಮನೆಯಲ್ಲಿ ಪ್ರಸಾದವನ್ನು ಸ್ವೀಕರಿಸಿ ಎಂದು ಕೇಳಿಕೊಂಡನು. ತುಸು ವ್ಯಗ್ರನಾಗಿ ಹೂಂ ಎಂದು ಒಪ್ಪಿಕೊಂಡು ದಾಸಿಮಯ್ಯನೊಂದಿಗೆ ಮಾತನಾಡಿದ ವೃದ್ಧನನ್ನು ದಂಪತಿಗಳಿಬ್ಬರು ಪ್ರೀತಿಯಿಂದ ಕರೆದು ಕೈಕಾಲಿಗೆ ನೀರು ಕೊಟ್ಟು ಹೊಟ್ಟೆ ತುಂಬಾ ಉಣಬಡಿಸಿದರು.

ದಂಪತಿಗಳ ಈ ಭಕ್ತಿ ಮತ್ತು ಪ್ರೀತಿಯನ್ನು ಕಂಡು ಸಾಕ್ಷಾತ್ ಶಿವನೇ ಅವರನ್ನು ಪರೀಕ್ಷಿಸಲು ಬಂದಿದ್ದನು ಎಂಬ ಈ ದಂತಕಥೆ ಅವರ ಕಾಯಕ ಮತ್ತು ದಾಸೋಹಕ್ಕೆ ಸಾಕ್ಷಿ.ದಾಸಿಮಯ್ಯನವರ ಭಕ್ತಿಯನ್ನು ಕುರಿತು 'ಬಸವಣ್ಣನವರು ತಮ್ಮ ವಚನದಲ್ಲಿ ಭಕ್ತಿ ಎಂತಹುದಯ್ಯ ದಾಸಯ್ಯ ಮಾಡಿದಂತಹದು' ಎಂದು ತಮ್ಮ ವಚನಗಳಲ್ಲಿ ಬಣ್ಣಿಸಿದ್ದಾರೆ.

ಇಂತಹ ದಾಸಿಮಯ್ಯನವರು ತಮ್ಮ ವೃತ್ತಿಯಾದ ನೇಕಾರಿಕೆಯಿಂದ ಜೇಡರ ದಾಸಿಮಯ್ಯ ಎಂಬ ನಾಮಧೇಯದಿಂದ ದೇವರ ದಾಸಿಮಯ್ಯ ಎಂದು ಹೆಸರಾದರು. ಆಗ ಆ ಪ್ರದೇಶವನ್ನು ಆಳುತ್ತಿದ್ದ ಚಾಲುಕ್ಯರ ರಾಜ 2ನೇ ಜಯ ಸಿಂಹನ ರಾಣಿ ಸುಗ್ಗಲಾದೇವಿಯು ದಾಸಿಮಯ್ಯನವರ ವಚನಗಳು ಮತ್ತು ಸಾತ್ವಿಕ ಬದುಕಿನ ಶೈಲಿಯಿಂದ ಪ್ರೇರೇಪಿತಳಾಗಿ ಅವರ ಶಿಷ್ಯಳಾಗಿ ಬದಲಾದರು.

ದೇವರ ದಾಸಿಮಯ್ಯ ಮತ್ತು ದುಗ್ಗಳೆಯರ ದಾಂಪತ್ಯವಂತೂ ಅನುರೂಪ ದಾಂಪತ್ಯ ಎಂದು ಹೆಸರಾಗಿದ್ದು ಅಂತಹ ಸದ್ಗುಣಿ ಸುಶೀಲೆ ಪತ್ನಿಯನ್ನು ಪಡೆದು ತಾನು ಧನ್ಯನಾದೆ ಎಂದು ದೇವರ ದಾಸಿಮಯ್ಯನವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ದೇವರ ದಾಸಿಮಯ್ಯ ಮತ್ತು ದುಗ್ಗಳೆಯರಿಗೆ ಸುವರ್ಚಲೆ ಎಂಬ ಓರ್ವ ಮಗಳಿದ್ದಳು. ದೇವರ ದಾಸಿಮಯ್ಯನವರು ಬಸವಾದಿ ಶರಣರಿಗೆ ಮುನ್ನವೇ ಈ ಧರೆಯಲ್ಲಿ ಜನಿಸಿ ತಮ್ಮ ವಚನಗಳ ಮೂಲಕ ಕಾಯಕ, ದಾಸೋಹ,ಲಿಂಗನಿಷ್ಠೆಯ ಮೂಲಕ ಜನ ಮಾನಸದಲ್ಲಿ ನೆಲೆ ನಿಂತಿದ್ದಾರೆ. ಅಂತಹ ಸಾತ್ವಿಕತೆಯೇ ಮೈವೆತ್ತ ದಂಪತಿಗಳಿಗೆ ಇದೋ ನಮ್ಮ ಶರಣು

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.**
**ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಕ್ರೀಡಾಪಟುಗಳ ಸಾಧನೆಗೆ ಬೇಕಿದೆ ವೈಜ್ಞಾನಿಕ ತರಬೇತಿ

## ಯುವ ಪ್ರತಿಭೆಗಳಿಗೆ ಸ್ಪೂರ್ತಿ ಅಂತರಾಷ್ಟ್ರೀಯ ಸೈಕ್ಲಿಸ್ಟ್ ವೆಂಕಪ್ಪ ಶಿವಪ್ಪ ಕೆಂಗಲಗುತ್ತಿ

■ **ಡಾ.ಸುಧಾಕರ ಜಿ.ಲಕ್ಕವಳ್ಳಿ**

ಹನುಮನ ನೋಡಿರಣ್ಣ...ಹನುಮನ ಭಜನೆ ಮಾಡಿರಣ್ಣ.. ಕ್ರೀಡಾಪಟು ಗಳ ಆರಾಧ್ಯ ದೈವ ಆಂಜನೇಯ ಇಂತಹ ಹನುಮ ಜಾತ್ರೆಯಲ್ಲಿ ಶಿವಪ್ಪ ಕೆಂಗಲಗುತ್ತಿ ಇವರನ್ನು ಸ್ನೇಹಿತರಾದ ಉದ್ದಂಡ ರವರು ನಿಮ್ಮ ಮಗನನ್ನು ಕ್ರೀಡೆಯಲ್ಲಿ ಸೇರಿಸಿ ಎಂದು ಕೇಳುತ್ತಾರೆ ತಂದೆ ಮಗನನ್ನು ಕೇಳಿ ತಿಳಿಸುತ್ತೇನೆ ಎನ್ನುತ್ತಾರೆ.



ಹೊಲದಲ್ಲಿ ಮನೆ ಮಾಡಿಕೊಂಡು ಕ್ರೀಡೆಯ ಬಗ್ಗೆ ತಿಳಿಯದ ಕುಟುಂಬ ಇದಾಗಿದ್ದು ಮುಂದೊಂದು ದಿನ ಈ ಮನೆಯ ಮಗ ರೈಲ್ವೆ ಇಲಾಖೆಯಲ್ಲಿ ಕ್ರೀಡಾ ಕೋಟಾದಡಿ ಕೇಂದ್ರ ಸರ್ಕಾರದ ಉದ್ಯೋಗ ಪಡೆದು ಕರ್ನಾಟಕ ಸರ್ಕಾರದ ಕ್ರೀಡಾ ಪ್ರಶಸ್ತಿ ಏಕಲವ್ಯ ಪಡೆಯುತ್ತಾನೆ ಎಂದರೆ ನಿಜಕ್ಕೂ ವಜ್ರಕಾಯನ ಆಶೀರ್ವಾದವೇ ಸರಿ.

ತಂದೆ ಮಗನನ್ನು ಒಪ್ಪಿಸಿ ಹೊಸ ಸೈಕಲ್ ತಂದುಕೊಟ್ಟು 02 ತಿಂಗಳುಗಳ ಕಾಲ ಊರಿನಲ್ಲಿಯೇ ತರಬೇತಿ ನೀಡುತ್ತಾರೆ ನಂತರ ಬಾಗಲಕೋಟೆಯ ಡಿ ವೈ ಈ ಎಸ್ ಕ್ರೀಡಾ ವಸತಿ ನಿಲಯಕ್ಕೆ ಆಯ್ಕೆಗೊಳ್ಳುತ್ತಾರೆ.

ಈ ಮಧ್ಯೆ ವಿಪರ್ಯಾಸವೆಂದರೆ ತಂದೆ ರಸ್ತೆ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರಿಕೊಳ್ಳುತ್ತಾರೆ ಕ್ರೀಡಾ ತರಬೇತಿ ಶಾಲೆಗೆ ಆಯ್ಕೆಗೊಂಡು 15 ದಿನಗಳು ಕಳೆದರೂ ಹಾಸ್ಟಲ್ ಗೆ ಹೋಗಿ ವರದಿ ಮಾಡಿಕೊಳ್ಳುವುದಿಲ್ಲ ಇದನ್ನು ಗಮನಿಸಿದ ಇಲಾಖೆಯವರು ಇನ್ನು ಒಂದು ದಿನ ಬಾಕಿ ಇದೆ ಬಂದು ವರದಿ ಮಾಡಿಕೋ ಎಂದು ತಿಳಿಸುತ್ತಾರೆ ನಂತರ ಆಸ್ಪತ್ರೆಯಿಂದ ನೇರವಾಗಿ ಹಾಸ್ಟೆಲ್ ಗೆ ಹೋಗಿ ಸೇರಿಕೊಳ್ಳುತ್ತಾರೆ.

ತಂದೆ ತಾಯಿಯನ್ನು ಬಿಟ್ಟಿರದ ಪರಿಸರದ ಮಡಿಲಿನಲ್ಲಿ ಆಡಿಕೊಂಡು ಬೆಳೆದ ಯುವಕ ಅಲ್ಲಿನ ವಾತಾವರಣಕ್ಕೆ



ಹೊಂದಿಕೊಳ್ಳದೆ ಮನೆಗೆ ಕರೆ ಮಾಡಿ ನನ್ನನ್ನು ಕರೆದುಕೊಂಡು ಹೋಗಿ ನನಗೆ ಇಲ್ಲಿರಲು ಸಾಧ್ಯವಿಲ್ಲ ಎಂದು ಅಂಗಲಾಚುತ್ತಾರೆ.

ಇವರನ್ನು ಕರೆದುಕೊಂಡು ಬರಲು ಅಣ್ಣಂದಿರು ಹಾಸ್ಟೆಲ್ ಗೆ ತೆರಳುತ್ತಾರೆ ಅಲ್ಲಿಯೇ ಈಗಾಗಲೇ ತರಬೇತಿ ಪಡೆಯುತ್ತಿದ್ದ ಹಿರಿಯ ಕ್ರೀಡಾಪಟುಗಳಾದ ಸೈಕ್ಲಿಸ್ಟ್ ಅನಿಲ್ ಮಡ್ಡಿ ಕುಸ್ತಿಪಟು ವೆಂಕಟೇಶ್ ರವರು ಅಣ್ಣಂದಿರನ್ನು ಕರೆದು ಇಂತಹ ಅವಕಾಶ ಮತ್ತೆಂದು ನಿಮ್ಮ ತಮ್ಮನಿಗೆ ಸಿಗುವುದಿಲ್ಲ ಅವನನ್ನು ಮರಳಿ ಮನೆಗೆ ಕರೆದುಕೊಂಡು ಹೋಗಬೇಡಿ ಅವನು ಇಲ್ಲಿ ತರಬೇತಿ ಪಡೆಯಲಿ ಎಂದು ಮನವೊಲಿಸಿ ನಿಮ್ಮ ಅಣ್ಣ ಸಂತೆಗೆ ಹೋಗಿದ್ದಾನೆ ಬರುತ್ತಾನೆ ಎಂದು ಸುಳ್ಳು ಹೇಳಿ ಸಾಧಕನನ್ನು ಅಲ್ಲಿಯೇ ಉಳಿದುಕೊಳ್ಳುವಂತೆ ಮಾಡುತ್ತಾರೆ ದಿನಗಳು ಉರುಳಿದಂತೆ ಹೊಂದಿಕೊಳ್ಳಲು ಆರಂಭಿಸಿದ ಯುವ ಪ್ರತಿಭೆ ರಾಷ್ಟಮಟ್ಟದಲ್ಲಿ ಪದಕ ಪಡೆಯಲು ಆರಂಭಿಸಿ ಮುಂದಿನ ಗುರಿಗಳ ಕಡೆಗೆ ಗಮನ ನೀಡುತ್ತಾರೆ ಇವರಿಗೆ ಅನಿತಾ ನಿಂಬರಗಿ ಹಾಗೂ ದುಂಡಪ್ಪ ಅಥಣಿ ಪ್ರಾಥಮಿಕ ತರಬೇತಿ ಹಾಗೂ ಮಾರ್ಗದರ್ಶನ ನೀಡಿರುತ್ತಾರೆ.

ರಾಷ್ಟ್ರೀಯ ಪದಕಗಳನ್ನು ಪಡೆದ ತರುವಾಯ 2014ರಲ್ಲಿ ದೆಹಲಿಯ ಸಾಯಿ ಸೆಂಟರ್ನಲ್ಲಿ ತರಬೇತಿ ಪಡೆಯಲು ಆಯ್ಕೆಗೊಳ್ಳುತ್ತಾರೆ ಅಲ್ಲಿಂದ 2023ರ ವರೆಗೆ 09 ವರ್ಷಗಳ ಕಾಲ ತರಬೇತಿ ಪೂರ್ಣಗೊಳಿಸಿ ಹಲವಾರು ರಾಷ್ಟ್ರೀಯ ಪದಕಗಳು ಹಾಗೂ ಅಂತರಾಷ್ಟ್ರೀಯ ಪದಕಗಳನ್ನು ಪಡೆದು ಭಾರತ ದೇಶಕ್ಕೆ ಕೀರ್ತಿಯನ್ನುತಂದಿರುತ್ತಾರೆ ಇವರಿಗೆ ಸೀನು ಹೈದರಾಬಾದ್,ಅಮರ್ ಸಿಂಗ್ (ಕೆನಡಾ ವಾಸಿ),ವಿ ಎಂ ಸಿಂಗ್ ದೆಹಲಿ ಇವರು ತರಬೇತಿ ನೀಡಿರುತ್ತಾರೆ.

ಕರ್ನಾಟಕ ಸರ್ಕಾರ ನಮ್ಮಲ್ಲಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸುವ ಕೆಲಸ ಮಾಡಬೇಕಾಗಿದ್ದು ಆ ನಿಟ್ಟಿನಲ್ಲಿ ಕ್ರೀಡೆಗೆ ಸರಿಹೊಂದುವ ಮೈದಾನಗಳು,ಪರಿಕರಗಳು ಹಾಗೂ ತರಬೇತುದಾರರನ್ನು ನಿಯೋಜಿಸಿ ವೈಜ್ಞಾನಿಕ ತರಬೇತಿ ನೀಡಿದ್ದೆ ಆದರೆ ಕರ್ನಾಟಕದ ಕ್ರೀಡಾಪಟುಗಳು ಹೆಚ್ಚಿನ ಸಾಧನೆ ಮಾಡುವಲ್ಲಿ ಸಂದೇಹವಿಲ್ಲ ಎನ್ನುತ್ತಾರೆ ಕ್ರೀಡಾ ಸಾಧಕ ವೆಂಕಪ್ಪ ನನಗೆ ಸಹಾಯ ಮಾಡಿದ,ಸಲಹೆ ನೀಡಿದ ಗುರುಹಿರಿಯರಿಗೆ,ಕುಟುಂಬ ವರ್ಗದವರಿಗೆ ಹಾಗೂ ನನ್ನ ಎಲ್ಲಾ ತರಬೇತಿದಾರರಿಗೆ ನಾನು ಸದಾ ಚಿರಋಣಿ ಎನ್ನುತ್ತಾ ಎಲ್ಲರ ಸಹಕಾರವನ್ನು ಸ್ಮರಿಸುತ್ತಾರೆ.

ಇವರ ಕ್ರೀಡಾ ಸಾಧನೆಗಳನ್ನು ಗಮನಿಸಿದ ಕೇಂದ್ರ ಸರ್ಕಾರ 2020 ರಲ್ಲಿ ರೈಲ್ವೆ ಇಲಾಖೆಯಲ್ಲಿ (2020) ಉದ್ಯೋಗ ನೀಡಿ ಗೌರವಿಸಿದೆ ಇವರಿಗೆ ನಿಜಪ್ಪಹೆಂಚೆತ್ತನವರ್ ರೈಲ್ವೆ ಇಲಾಖೆಯಲ್ಲಿ ತರಬೇತುದಾರರಾಗಿ ಕಾರ್ಯನಿರ್ವಹಿಸಿರುತ್ತಾರೆ.330 ಬೇಸ್ ಲೀವ್ ಇದರ ಅಡಿಯಲ್ಲಿ ಸದ್ಯ ಪಂಜಾಬ್ನ ಪಟಿಯಾಲ ಇಲ್ಲಿ ಜೋಗಿಂದರ್ ಇವರ ಬಳಿ ತರಬೇತಿಯನ್ನು ಪಡೆಯುತ್ತಿದ್ದಾರೆ.

2026ರಲ್ಲಿ ನಡೆಯುವ ಏಷ್ಯನ್ ಮತ್ತು ಕಾಮನ್ವೆಲ್ತ್ ಗೇಮ್ಸ್ ಗಳಲ್ಲಿ ಪದಕ ಪಡೆಯಬೇಕೆಂಬ ನಿಮ್ಮ ಗುರಿ ನೆರವೇರಲಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮತ್ತೆ ಶುರುವಾಯಿತು

ಮತ್ತೆ ಶುರುವಾಯಿತು ಮಳೆಯು
ವಟ ಗುಟ್ಟುತ್ತಿದೆ ಕಪ್ಪೆಯು
ಸುತ್ತಲು ಹಕ್ಕಿಗಳ ಕಲರವವು
ಸಂತೋಷದಿ ಕುಣಿದಿದೆ ಮನವು

ಕಪ್ಪು ಕಾರ್ಮೋಡ ಸರಿದು
ತಂಪಾದ ಮಳೆಯು ಸುರಿದು
ರೈತರು ಕುಪ್ಪಳಿಸಿ ಕುಣಿದು
ಬಿತ್ತಿದರು ಹೊಲವ ನಲಿದು

ಬಾನು ಭುವಿಯ ಮಿಲನ
ಮುಂಗಾರು ಮಳೆಯ ಸಿಂಚನ
ಮೇಘ ರಾಜನ ಗಾಯನ
ಹೊಳೆಯುವ ಮಿಂಚಿನ ನರ್ತನ

ಕಟ್ಟಿತು ಕಳೆಯು ಇಳೆಗೆ
ಸಂತಸವು ಧರೆಯ ಜೀವಿಗೆ
ಹದವು ಧರಣಿ ಉಳುಮೆಗೆ
ಆಧಾರವು ರೈತರ ಬಾಳಿಗೆ

– ಚೇತನ ಭಾರ್ಗವ ಬೆಂಗಳೂರು

## ಮೈಕ್ರೋ ನ್ಯೂಸ್

### ಅತಿಥಿ ಉಪನ್ಯಾಸಕರು, ಸಂಪನ್ಮೂಲ ವ್ಯಕ್ತಿಗಳಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2025–26 ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ಸಂಸ್ಥೆಯ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರು, ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ ಎಂದು ಮೈಸೂರು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಡೀನ್ ತಿಳಿಸಿದ್ದಾರೆ.

ಬೋಧನಾ ವಿಷಯಕ್ಕೆ ಪ್ರಾಯೋಗಿಕ ಮತ್ತು ಥಿಯರಿ, ಭಾಷಾ ವಿಷಯ ಸೇರಿದಂತೆ ಅನ್ವಯ ಕಲೆ, ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ, ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ, ಕಲಾ ಇತಿಹಾಸ, ಕನ್ನಡ, ಇಂಗ್ಲೀಷ್, ಹಿಂದಿ, ಭಾರತ ಮತ್ತು ಭಾರತೀಯ ಸಂವಿಧಾನ ಹಾಗೂ ಸಂವಿಧಾನದ ಮೌಲ್ಯಗಳು, ಸೈಬರ್ ಸೆಕ್ಯೂರಿಟಿ, ಅರ್ಟಿಫಿಶಿಯಲ್ ಇಂಟಲ್‌ಜೆನ್ಸಿ ವಿಷಯಗಳಿಗೆ ಗೌರವ ಸಂಭಾವನೆ ಅಧಾರದ ಮೇಲೆ ಬೋಧಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಜೂ.16 ರ ಸಂಜೆ 5:30 ಗಂಟೆಯೊಳಗೆ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿದೆ. ಜೂ.26 ರಂದು ಬೆಳಿಗ್ಗೆ 11 ಗಂಟೆಗೆ ಸಂದರ್ಶನವನ್ನು ಸಂಸ್ಥೆಯಲ್ಲಿ ನಡೆಸಲಾಗುವುದು. ತರಗತಿಗಳು ಅನ್ವಯವಾಗುವಂತೆ ಕಾರ್ಯನಿರ್ವಹಿಸಲು ತಿಳಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ www.mysore.nic.in ಮತ್ತು www.cavamysore.karnataka.gov.in ಅಂತರ್ಜಾಲದ ಮೂಲಕಮಾಹಿತಿಯನ್ನುಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂ.08212438931 ನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸುತ್ತ ಮುತ್ತ
## ಕುಂದು-ಕೊರತೆ
**********

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು
ಹಂಪಿ ಟೈಮ್ಸ್ ದಿನಪತ್ರಿಕೆ
**9448633038**
ವಾಟ್ಸಪ್ ನಂಬರ್ ಗೆ ಕಳುಹಿಸಿ.


**1838 ರಲ್ಲಿ ಅಶೋಕ ಎನ್ನುವ ದೊರೆ ಕ್ರಿ.ಪೂ.2300 ವರ್ಷಗಳ ಹಿಂದೆ ಬರೆಸಿದ್ದ ಎಲ್ಲ ಶಾಸನಗಳನ್ನೂ ಇಂಗ್ಲೆಂಡಿನ ಜೇಮ್ಸ್ ಪ್ರಿನ್ಸೆಪ್ ಓದಿ ಬ್ರಾಹ್ಮೀ ಲಿಪಿಯ ರಹಸ್ಯವನ್ನು, ಭಾರತದ ಎರಡು ಸಾವಿರ ವರ್ಷಗಳ ಹಿಂದಿನ ಇತಿಹಾಸವನ್ನು ಜಗತ್ತಿನೆದುರು ಅನಾವರಣಗೊಳಿಸಿದರು. ಕಾಶಿಯಲ್ಲಿನ ಎಲ್ಲ ವಾಸ್ತುಶಿಲ್ಪ ಯೋಜನೆಗಳ ಜವಾಬ್ದಾರಿಯನ್ನು ವಹಿಸಿಕೊಂಡರು. ಹೂಗ್ಲಿ ಮತ್ತು ಗಂಗಾ ನದಿಯನ್ನು ಸಂಪರ್ಕಿಸುವ ಕಾಲುವೆಯನ್ನು ನಿರ್ಮಿಸಿದರು. ತೂಕ ಮತ್ತು ಅಳತೆಯ ಮಾಪನ ವ್ಯವಸ್ಥೆಯನ್ನು ಸುಧಾರಿಸಿದ ಅಸಾಧಾರಣ ಪ್ರತಿಭಾವಂತರು, ಅಸಾಮಾನ್ಯ ಸಾಧಕರು ಆಗಿದ್ದರು. ಅವರ ಮಹಾನ್ ಸಾಧನೆಗಳಿಂದಾಗಿ ಭಾರತೀಯ ವಿದ್ವತ್ ವಲಯ ಅವರನ್ನು ಸದಾ ಸ್ಮರಿಸುತ್ತದೆ. ನಮಗಿವವರು ಪ್ರಾತಃಸ್ಮರಣೀಯರು.**

# ಶಾಸನಗಳ ಪಿತಾಮಹ - ಜೇಮ್ಸ್ ಪ್ರಿನ್ಸೆಪ್

ಭಾರತವನ್ನು ಸಂದರ್ಶಿಸಿದ ವಿದೇಶೀಯರು ನಮ್ಮನ್ನು ಕುರಿತು ಒಂದು ಮಾತನ್ನು ಸದಾ ಹೇಳುತ್ತಿರುತ್ತಾರೆ 'ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇಲ್ಲ, ಇತಿಹಾಸವನ್ನು ಸಮರ್ಪಕವಾಗಿ ಬರೆದಿಟ್ಟಿಲ್ಲ. ಇತಿಹಾಸವನ್ನು ಕೇಳಿದರೆ ಪುರಾಣ ಹೇಳುತ್ತಾರೆ, ಇಲ್ಲವೇ ಕಥೆ ಹೇಳುತ್ತಾರೆ.' ಇದು ಅರ್ಧ ಸತ್ಯದ ಮಾತು. ಏಕೆಂದರೆ ಅವರೆಲ್ಲಾ ಈ ಮಾತುಗಳನ್ನು ಹೇಳುವಾಗ ಭಾರತದ ಶಾಸನಗಳ ಚಿಪ್ಪೊಡೆದಿರಲಿಲ್ಲ. ಅಲ್ಲದೇ ನಮ್ಮ ಐತಿಹಾಸಿಕ ಸಂಗತಿಗಳೆಲ್ಲ ಪುರಾಣಗಳೊಂದಿಗೆ ಸೇರಿಹೋಗಿದ್ದವು. ಆದರೆ ಇವುಗಳು ತೇದಿಯುಕ್ತ ಸಂಗತಿಗಳಾಗಿರಲಿಲ್ಲ. ರಾಮಾಯಣ ಮಹಾಭಾರತಗಳು ಹಾಗೂ ಇತರ ಮಹಾಕಾವ್ಯಗಳ ಘಟನೆಗಳು ನಮ್ಮ ನಾಡಿನಲ್ಲೇ ನಡೆದದ್ದು ಎಂದು ಇಂದಿಗೂ ಎಲ್ಲ ಕಡೆಗೂ ಅಂದರೆ ಭಾರತದಾದ್ಯಂತ ಹೇಳುತ್ತಾರೆ. ಅನೇಕ ಕಡೆಗಳಲ್ಲಿ ಸ್ಥಳೀಯ ಐತಿಹ್ಯಗಳೂ ಇದಕ್ಕೆ ಪುಷ್ಟಿ ನೀಡುತ್ತವೆ. ಆದರೆ ಆಧುನಿಕ ಅರ್ಥದಲ್ಲಿ ಇವು ಇತಿಹಾಸ ಆಗಲಾರವು. ಇಂತಹ ಸಂದರ್ಭದಲ್ಲಿ ಇಂಗ್ಲೆಂಡಿನಿಂದ ಬಂದ ಜೇಮ್ಸ್ ಪ್ರಿನ್ಸೆಪ್ (1799 – 1840) ಎಂಬ ವ್ಯಕ್ತಿ ಅಶೋಕನ ಶಿಲಾಶಾಸನಗಳ ಒಗಟು ಬಿಡಿಸಿ ಎರೆಡು ಸಾವಿರದ ಮೂರು ನೂರು ವರ್ಷಗಳ ಹಿಂದಿನ ಇತಿಹಾಸವನ್ನು ನಮ್ಮೆದುರು ಬಿಚ್ಚಿಟ್ಟರು. ಆಗ ಇಡೀ ಜಗತ್ತು ಭಾರತದೆಡೆಗೆ ಅಚ್ಚರಿಯಿಂದ ತಿರುಗಿ ನೋಡಿತು.

ಜೇಮ್ಸ್ ಪ್ರಿನ್ಸೆಪ್ ಅವರ ತಂದೆ ಜಾನ್ ಪ್ರಿನ್ಸೆಪ್ ಹಾಗೂ ತಾಯಿ ಸೋಫಿಯಾ ಎಲಿಜಬೆತ್ ಆರಿಯೊಲ್. ಇವರು ಇಂಗ್ಲೆಂಡಿನಲ್ಲಿ ವಾಸವಿದ್ದವರು. ಜೇಮ್ಸ್ ಪ್ರಿನ್ಸೆಪ್ ಇವರಿಗೆ ಹತ್ತನೆಯ ಮಗುವಾಗಿ ಜನಿಸಿದರು. ಜಾನ್ ಪ್ರಿನ್ಸೆಪ್ ಉದ್ಯೋಗಕ್ಕಾಗಿ ಭಾರತಕ್ಕೆ ಬಂದು ಇಲ್ಲಿ ಇಂಡಿಗೋ ಬೆಳೆ (ನೀಲಿ ಗಿಡಗಳ ತೋಟ) ಬೆಳೆದು, ಪ್ಲಾಂಟರ್ ಎನಿಸಿಕೊಂಡು ಅಪಾರ ಲಾಭ ಗಳಿಸಿದರು. ಸುಮಾರು ನಲವತ್ತು ಸಾವಿರ ಪೌಂಡ್ ಹಣ ಗಳಿಸಿ ಶ್ರೀಮಂತರಾಗಿ ಇಂಗ್ಲೆಂಡಿಗೆ ಮರಳಿದರು. ಲಂಡನ್ ನಲ್ಲಿ ವ್ಯಾಪಾರಿಗಳೆಂದು ಹೆಸರು ಪಡೆದು ಮುಂದೆ ಅಲ್ಲಿಯ ಸಂಸತ್ನಲ್ಲಿ ಸದಸ್ಯರಾದರು.

ಜೇಮ್ಸ್ ಪ್ರಿನ್ಸೆಪ್ ಶಾಲೆಯಲ್ಲಿ ಕಲಿತರಾದರೂ ಮನೆಯಲ್ಲಿ ಕಲಿತದ್ದೇ ಹೆಚ್ಚು. ಇವರಿಗೆ ಜನ್ಮಜಾತವಾಗಿ ಚಿತ್ರಕಲೆ ಸಿದ್ಧಿಯಾಗಿತ್ತು. ಅತ್ಯಂತ ಸೂಕ್ಷ್ಮ ವಿವರಗಳೊಂದಿಗೆ ಚಿತ್ರಗಳನ್ನು ರಚಿಸುತ್ತಿದ್ದರು. ಲಂಡನ್ನಲ್ಲಿ 'ಅಗಸ್ಟಸ್ ಪುಗಿನ್' ಎನ್ನುವವರ ಬಳಿ ವಾಸ್ತುಶಿಲ್ಪವನ್ನು ಕಲಿಯಲು ಪ್ರಯತ್ನಿಸಿದರು. ಆದರೆ ಸೋಂಕಿಗೊಳಗಾಗಿ ದೃಷ್ಟಿ ಕ್ಷೀಣಿಸಿ ವಿದ್ಯೆ ಪೂರ್ಣ ಆಗಲಿಲ್ಲ. ನಂತರ ಅಲ್ಲಿ ಆಸ್ಪತ್ರೆಯೊಂದರಲ್ಲಿ ರಸಾಯನ ಶಾಸ್ತ್ರವನ್ನು ಕಲಿತರು. ನಂತರ ಲಂಡನ್ ನ ರಾಯಲ್ ಟಂಕಸಾಲೆಯಲ್ಲಿ ಅಪ್ರೆಂಟಿಸ್ ಆಗಿ ದುಡಿದು ಅನುಭವ ಗಳಿಸಿದರು. ಇವರ ತಂದೆಯ ಪ್ರಭಾವದಿಂದಾಗಿ ಕೊಲ್ಕತ್ತಾದ ಟಂಕಸಾಲೆಯಲ್ಲಿ 'ಅಸ್ಸೇಮಾಸ್ಟರ್' ಹುದ್ದೆಯನ್ನು ಗಳಿಸಿ 1819 ರಲ್ಲಿ ಕೊಲ್ಕತ್ತಾಕ್ಕೆ ಬಂದರು. ಟಂಕಸಾಲೆಯಲ್ಲಿ ಲೋಹಗಳ ಗುಣಮಟ್ಟ ಪರೀಕ್ಷಕರನ್ನು ಅಸ್ಸೇಮಾಸ್ಟರ್ ಎನ್ನುತ್ತಿದ್ದರು. ಅಲ್ಲಿ ಅಚ್ಚಾಗುತ್ತಿದ್ದ ನಾಣ್ಯಗಳ, ಲೋಹಗಳ ಪರೀಕ್ಷೆ, ಶೋಧನೆ, ತೂಕ ಇತ್ಯಾದಿಗಳನ್ನು ಇವರು ಪರೀಕ್ಷಿಸಬೇಕಾಗಿತ್ತು. ಕೊಲ್ಕತ್ತಾದ ಟಂಕಸಾಲೆ ಯಲ್ಲಿ ಇವರ ಹಿರಿಯ ಅಧಿಕಾರಿಯಾಗಿದ್ದವರು ಹೋರೇಸ್ ಹೇಮ್ಯಾನ್ ವಿಲ್ಸನ್ (H H Wilson) ಎಂಬುವರು. ಇವರು ಆ ಕಾಲದ ಪ್ರಾಚ್ಯತಜ್ಞರೂ, ಸಂಸ್ಕೃತ ಪಂಡಿತರೂ, ಆಯುರ್ವೇದ ತಜ್ಞರೂ ಆಗಿದ್ದರು. ಅಲ್ಲದೇ ಋಗ್ವೇದ, ವಿಷ್ಣುಪುರಾಣ, ಮೇಘದೂತ ಇವುಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದ್ದ ಮೊದಲ ವಿದ್ವಾಂಸರಾಗಿದ್ದರು. ಇಂತಹವರ ಸಹವಾಸದ ಫಲವಾಗಿ ಜೇಮ್ಸ್ ಪ್ರಿನ್ಸೆಪ್ ಸಹಜವಾಗಿಯೇ ಭಾರತದ ಇತಿಹಾಸ, ಸಂಸ್ಕೃತಿಯತ್ತ ಆಕರ್ಷಿತರಾದರು. ಒಂದು ವರ್ಷದ ನಂತರ ಜೇಮ್ಸ್ ಪ್ರಿನ್ಸೆಪ್ ಕಾಶಿಯಲ್ಲಿದ್ದ ಟಂಕಸಾಲೆಗೆ ವರ್ಗಾವಣೆ ಆದರು. ಇಲ್ಲಿ 1820 ರಿಂದ 1830 ರ ವರೆಗೆ ಹತ್ತು ವರ್ಷಗಳ ಕಾಲ ದುಡಿದರು. ನಂತರ ಕೊಲ್ಕತ್ತಾದ ಟಂಕಸಾಲೆಗೆ ವರ್ಗಾವಣೆಯಾದರು. ಒಟ್ಟು ಅವರ ಜೀವಿತಾವಧಿಯ ನಲವತ್ತು ವರ್ಷಗಳಲ್ಲಿ ಇಪ್ಪತ್ತು ವರ್ಷಗಳನ್ನು ಭಾರತದಲ್ಲಿ ಕಳೆದರು. ತಮ್ಮ ಕೆಲಸದಿಂದ ಭಾರತದ ಘನತೆಯನ್ನು ಹೆಚ್ಚಿಸಿದರು.




ಬಿ.ಎಂ.ರಾಜಶೇಖರ
ಮೊ: 9900705323
Scan For Digital Colourful HAMPI TIMES E-paper

ಜೇಮ್ಸ್ ಪ್ರಿನ್ಸೆಪ್ ಕಾಶಿಗೆ ಬಂದ ನಂತರ ಇಲ್ಲಿದ್ದ ಕಟ್ಟಡಗಳಿಂದ, ಗಂಗಾ ನದಿಯಿಂದ ಒಟ್ಟಾರೆ ಈ ಊರಿಗೆ ಆಕರ್ಷಿತರಾದರು. ಇಲ್ಲಿದ್ದ ದೇವಾಲಯ ಗಳು, ಅವುಗಳ ವಾಸ್ತುಶಿಲ್ಪಗಳಿಂದ ಆಕರ್ಷಿತರಾಗಿ ಜಲವರ್ಣ ಚಿತ್ರಗಳನ್ನು ರಚಿಸಿದರು. ಕಾಶಿಯಲ್ಲಿನ ಉತ್ಸವಗಳು, ಸ್ಮಾರಕಗಳು, ಕಟ್ಟಡಗಳು, ಸರೋವರಗಳನ್ನು ಅತ್ಯಂತ ಸೂಕ್ಷ್ಮ ವಿವರಗಳೊಂದಿಗೆ, ಕುಸುರಿ ಕೆಲಸದೊಂದಿಗೆ ಸುಂದರವಾದ ಅನೇಕ ಚಿತ್ರಗಳನ್ನು ರಚಿಸಿದರು. ಈ ಚಿತ್ರಗಳೆಲ್ಲವೂ 1930 – 34 ರ ಮಧ್ಯದಲ್ಲಿ ಲಂಡನ್ ನಲ್ಲಿ 'ಬನಾರಸ್ ಇಲ್ಲಸ್ಟ್ರೇಟೆಡ್' ಎಂಬ ಸರಣಿ ರೂಪದಲ್ಲಿ ಪ್ರಕಟವಾದವು.

ಜೇಮ್ಸ್ ಪ್ರಿನ್ಸೆಪ್ ಅನೇಕ ವಿದ್ಯೆಗಳಲ್ಲಿ ಆಸಕ್ತರೂ ಪರಿಣಿತರೂ ಆಗಿದ್ದರು. ಇವರು ಚಿತ್ರಕಲಾವಿದರೂ, ಲೋಹಶಾಸ್ತ್ರ ತಜ್ಞರೂ, ವಾಸ್ತುಶಿಲ್ಪಿಯೂ, ನಾಣ್ಯ ತಜ್ಞರೂ, ಲೇಖಕರೂ, ಪುರಾತತ್ವ ಶಾಸ್ತ್ರಜ್ಞರೂ ಆಗಿದ್ದರು. ಅಲ್ಲದೇ ಹವಾಮಾನಶಾಸ್ತ್ರ, ಖಗೋಳಶಾಸ್ತ್ರ, ಮಾಪನಶಾಸ್ತ್ರಗಳಲ್ಲಿ ಆಸಕ್ತರಾಗಿದ್ದರು. ಹೀಗೆ ಅನೇಕ ಶಾಸ್ತ್ರಗಳಲ್ಲಿ ಪರಿಣಿತರಾಗಿದ್ದರಿಂದ ಶಾಸನಗಳ ಗುಟ್ಟನ್ನು ಒಡೆಯಲು ಇವರಿಗೆ ಸಾಧ್ಯವಾಯಿತು.

ಕೊಲ್ಕತ್ತಾದ ಟಂಕಸಾಲೆಯಲ್ಲಿ ಇವರ ಹಿರಿಯ ಅಧಿಕಾರಿಯಾಗಿದ್ದ ಎಚ್. ಎಚ್. ವಿಲ್ಸನ್ 'ರಾಯಲ್ ಏಷಿಯಾಟಿಕ್ ಸೊಸೈಟಿ' ಯ ಕಾರ್ಯದರ್ಶಿಯಾಗಿದ್ದರು. ಅವರು ಅಲ್ಲಿಂದ ವರ್ಗಾವಣೆಯಾದಾಗ ಜೇಮ್ಸ್ ಪ್ರಿನ್ಸೆಪ್ ಅದರ ಕಾರ್ಯದರ್ಶಿಯಾಗಿ ನೇಮಕವಾದರು (1832) ಜೊತೆಗೆ The



Journal of Asiatic Society ಎಂಬ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು (1784). ಇದು ಪ್ರಧಾನವಾಗಿ ಭಾರತದ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಪುರಾತತ್ವ ಮುಂತಾದವುಗಳ ಶೋಧನೆ, ಪ್ರಕಟಣೆಗಾಗಿ ಮೀಸಲಾಗಿತ್ತು. ಆಗ ಅವರಿಗೆ ಕೇವಲ ಮೂವತ್ತೊಂದು ವರ್ಷ ವಯಸ್ಸಾಗಿತ್ತು.

ಜೇಮ್ಸ್ ಪ್ರಿನ್ಸೆಪ್ ಅವರಿಗೆ ನಾಣ್ಯಗಳು ಹಾಗೂ ನಾಣ್ಯಶಾಸ್ತ್ರದ ಕುರಿತು ಅಪಾರ ಆಸಕ್ತಿ ಇತ್ತು. ಟಂಕಸಾಲೆಯಲ್ಲಿ ಮುದ್ರಿಸಲಾಗುತ್ತಿದ್ದ ನಾಣ್ಯಗಳ ಹೊರತಾಗಿ ಭಾರತದ ಹಾಗೂ ನಾನಾ ದೇಶಗಳ ಸಂಗ್ರಹ ಅವರ ಬಳಿ ಇತ್ತು. ದೇಶದ ಎಲ್ಲ ಕಡೆಗಳಿಂದ ಅವರಿಗೆ




ನಾಣ್ಯಗಳನ್ನು, ತಾಳೆ ಓಲೆಗಳನ್ನು ಕಳುಹಿಸುತ್ತಿದ್ದರು. ಹಾಗಾಗಿ ಅವುಗಳ ಅಧ್ಯಯನದಿಂದ ಏಷಿಯಾಟಿಕ್ ಸೊಸೈಟಿ ಪತ್ರಿಕೆಯಲ್ಲಿ ಇವುಗಳ ಕುರಿತು ನಿರಂತರವಾಗಿ ಲೇಖನಗಳನ್ನು ರಚಿಸಿ ಪ್ರಕಟಿಸಿದರು. ಲೋಹ ಶಾಸ್ತ್ರ, ಖನಿಜಶಾಸ್ತ್ರ, ರಸಾಯನಶಾಸ್ತ್ರ, ನಾಣ್ಯಶಾಸ್ತ್ರ, ವಿಜ್ಞಾನ ಪುರಾತತ್ವಗಳ ಕುರಿತು ಹೆಚ್ಚಾಗಿ ಇವರ ಲೇಖನಗಳು ಇರುತ್ತಿದ್ದವು. ಇಲ್ಲಿ ಇದ್ದಾಗಲೇ ಕುಶಾನರ, ಗುಪ್ತರ, ಬ್ಯಾಕ್ಟ್ರಿಯಾದ ನಾಣ್ಯಗಳ ಅಧ್ಯಯನ ಮಾಡಿದರು. ಮುಂದೆ ಶಾಸನಗಳನ್ನು ಅರ್ಥ ಮಾಡಿಕೊಳ್ಳಲು ಇದು



ತುಂಬಾ ಸಹಾಯಕವಾಯಿತು.

ಕಾಶಿಯಲ್ಲಿದ್ದಾಗ ಈ ಊರಿನ ನಕ್ಷೆಯನ್ನು ಎಂಟು ಇಂಚುಗಳಿಗೆ ಒಂದು ಮೈಲಿಯಂತೆ ನಿಖರವಾದ ಅಳತೆಯೊಂದಿಗೆ ಸಿದ್ಧಪಡಿಸಿದರು. ಕಾಶಿಯಲ್ಲಿನ ಎಲ್ಲ ವಾಸ್ತುಶಿಲ್ಪ ಯೋಜನೆಗಳ ಜವಾಬ್ದಾರಿಯನ್ನು ವಹಿಸಿಕೊಂಡರು. ಹೂಗ್ಲಿ ಮತ್ತು ಗಂಗಾ ನದಿಯನ್ನು ಸಂಪರ್ಕಿಸುವ ಕಾಲುವೆಯನ್ನು ನಿರ್ಮಿಸಿದರು. ತೂಕ ಮತ್ತು ಅಳತೆಯ ಮಾಪನ ವ್ಯವಸ್ಥೆಯನ್ನು ಸುಧಾರಿಸಿದರು. ಹೀಗೆ ಅನೇಕ ಕಾರ್ಯಗಳನ್ನು ಬಿಡುವಿಲ್ಲದೇ ಮಾಡುತ್ತಿದ್ದರು. ಇದರಿಂದಾಗಿ ಅವರ ಆರೋಗ್ಯ ಹದಗೆಡತೊಡಗಿತು.

ಅವರು ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯ ಸಂಪಾದಕರಾಗಿದ್ದಾಗ ಶಾಸನಗಳ ಕುರಿತಾಗಿ ಅನೇಕ ಲೇಖನಗಳು ಪ್ರಕಟವಾಗುತ್ತಿದ್ದವು. ಕ್ರಿಶ್ಚಿಯನ್ ಲಾಸೆನ್, ಎಡ್ವಿನ್ ನಾರಿಸ್, ಎಚ್.ಎಚ್.ವಿಲ್ಸನ್, ಅಲೆಕ್ಸಾಂಡರ್ ಕಂನ್ನಿಂಗ್ ಹ್ಯಾಂ ಮುಂತಾದ ಯುರೋಪಿಯನ್ ವಿದ್ವಾಂಸರು ಶಾಸನಗಳ ಕುರಿತು ಸಾಕಷ್ಟು ಕೆಲಸ ಮಾಡಿದ್ದರು. ಆದರೂ ಶಾಸನಗಳ ಲಿಪಿ ಹಾಗೂ ಭಾಷೆಯ ಕುರಿತು ಯಾರಿಗೂ ಪೂರ್ಣವಾಗಿ ತಿಳಿದಿರಲಿಲ್ಲ. ಭಾರತದ ಶಾಸನಗಳು ಒಗಟಾಗಿಯೇ ಉಳಿದಿದ್ದವು. ಮೊದಲ ಬಾರಿಗೆ ಈ ಒಗಟನ್ನು ಒಡೆದು ಅಶೋಕನ ಶಾಸನಗಳನ್ನು ಓದಿ ಅರ್ಥ ಹೇಳಿದವರೇ ಜೇಮ್ಸ್ ಪ್ರಿನ್ಸೆಪ್.

ಪ್ರಿನ್ಸೆಪ್ ಭಾರತದ ನಾಣ್ಯಗಳೊಂದಿಗೆ ವಾಯುವ್ಯ ಭಾರತದ ನಾಣ್ಯಗಳನ್ನೂ ಅಧ್ಯಯನ ಮಾಡಿದ್ದರು. ಅಲ್ಲಿನ ನಾಣ್ಯ, ಶಾಸನಗಳು ಖರೋಷ್ಠಿ ಭಾಷೆಯಲ್ಲಿದ್ದವು. ಗ್ರೀಕ್ ಭಾಷೆ, ಅಂಕೆಗಳನ್ನೂ ಬಳಸಲಾಗಿತ್ತು. ಹಾಗಾಗಿ ಗ್ರೀಕರು ಹಾಗೂ ಕುಶಾನರ ನಾಣ್ಯಗಳನ್ನೂ ಆಸಕ್ತಿಯಿಂದ ಅಧ್ಯಯನ ಮಾಡಿದರು. ಈ ಸಮಯದಲ್ಲಿ ಪ್ರಿನ್ಸೆಪ್ ಅವರ ಸೂಚನೆಯಂತೆ ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಂ 'ಭಾರತೀಯ ಶಾಸನಗಳ ಸಂಗ್ರಹ' ಎಂಬ ಗ್ರಂಥವನ್ನು ಹೊರತಂದು ಅಧ್ಯಯನ ಮಾಡಿದರು. ಪ್ರಿನ್ಸೆಪ್ ಈ ಎಲ್ಲ ಅಧ್ಯಯನದಲ್ಲಿ ಗಾಢವಾಗಿ ಮುಳುಗಿದ್ದರು. ನಾಣ್ಯ ಹಾಗೂ ಶಾಸನಗಳ ತೌಲನಿಕ ಅಧ್ಯಯನದಲ್ಲಿ ಅವರು 'ದಾನ' ಎಂಬ ಎರೆಡು ಬ್ರಾಹ್ಮೀ ಲಿಪಿಯ ಅಕ್ಷರಗಳನ್ನು ಮೊದಲಿಗೆ ಗುರುತಿಸಿದರು. ನಂತರ ಒಂದೊಂದೇ ಅಕ್ಷರಗಳನ್ನು ಅರ್ಥೈಸಿ ಬ್ರಾಹ್ಮೀ ಲಿಪಿಯನ್ನು ಅದರ ರಹಸ್ಯವನ್ನು ಹೊರತೆಗೆದರು. ಅಫಘಾನಿಸ್ತಾನದಿಂದ ಹಿಡಿದು ಶ್ರೀಲಂಕಾದವರೆಗಿನ ಬ್ರಾಹ್ಮೀ ಭಾಷೆಯ ಅನೇಕ ಶಾಸನಗಳನ್ನು ಪದೇ ಪದೇ ಓದಿದರು. ಅಲಹಾಬಾದ್ ಸ್ತಂಭ ಶಾಸನದಲ್ಲಿ, ಸಾಂಚಿಯಸ್ತೂಪದ ಮೇಲೆ, ನೇಪಾಳದ ಶಾಸನಗಳಿಂದ ಅನೇಕ ಅಕ್ಷರಗಳನ್ನು, ವಾಕ್ಯಗಳನ್ನು ಗುರುತಿಸಿದರು. ಸಮುದ್ರಗುಪ್ತ ಎನ್ನುವ ಹೆಸರನ್ನು ಗುರುತಿಸಿ ಗುಪ್ತವಂಶದ ಕುರಿತು ತಿಳಿದುಕೊಂಡರು. ಈ ಎಲ್ಲ ಆಧಾರದಿಂದ ದೇವನಾಂಪಿಯ, ಪಿಯದಸಿ ಎನ್ನುವ ದೊರೆ ಭಾರತದಾದ್ಯಂತ ಬ್ರಾಹ್ಮೀಲಿಪಿಯಲ್ಲಿ ಶಾಸನಗಳನ್ನು ಬರೆಸಿದ್ದಾನೆ. ಇವು ಧರ್ಮಶಾಸನಗಳು ಹಾಗೂ ಈತ ದೊಡ್ಡ ಬೌದ್ಧ ದೊರೆ ಎಂದು ಗುರುತಿಸಿದರು. ಆದರೆ ರಾಜನ ಹೆಸರು ತಿಳಿಯಲಾಗಲಿಲ್ಲ. ಶ್ರೀಲಂಕಾದಲ್ಲಿದ್ದ ಜಾರ್ಜ ಟರ್ನರ್ ಎನ್ನುವವರು ಶ್ರೀಲಂಕಾದ ಶಾಸನದಲ್ಲಿ ದೇವನಾಂಪಿಯ ಎಂದರೆ ಅಶೋಕ ಎಂದು ಇರುವುದನ್ನು ತಿಳಿಸಿದರು. ಕೊನೆಗೂ 1838 ರಲ್ಲಿ ಅಶೋಕ ಎನ್ನುವ ದೊರೆ ಕ್ರಿ.ಪೂ.2300 ವರ್ಷಗಳ ಹಿಂದೆ ಬರೆಸಿದ್ದ ಎಲ್ಲ ಶಾಸನಗಳನ್ನೂ ಓದಿ ಬ್ರಾಹ್ಮೀ ಲಿಪಿಯ ರಹಸ್ಯವನ್ನು ಹೊರತೆಗೆದರು. ಜೇಮ್ಸ್ ಪ್ರಿನ್ಸೆಪ್ ಬ್ರಾಹ್ಮೀಲಿಪಿಯ ರಹಸ್ಯವನ್ನು ಹೊರತೆಗೆದು ಭಾರತದ ಎರೆಡು ಸಾವಿರ ವರ್ಷಗಳ ಹಿಂದಿನ ಇತಿಹಾಸವನ್ನು ಜಗತ್ತಿನೆದುರು ಅನಾವರಣ ಮಾಡಿದರು. ಈ ಶಾಸನಗಳ ಆಧಾರದಿಂದ ಪ್ರಾಚೀನ ಮೌರ್ಯ ಸಾಮ್ರಾಜ್ಯ, ಅಶೋಕ, ಬೌದ್ಧ ಧರ್ಮ, ಆಗಿನ ಜನಜೀವನ, ಕಲೆ, ಸಾಹಿತ್ಯ, ಸಂಸ್ಕೃತಿ ಎಲ್ಲವೂ ತಿಳಿಯುವಂತಾಯಿತು. ಹಾಗಾಗಿ ಜೇಮ್ಸ್ ಪ್ರಿನ್ಸೆಪ್ ಸಾಧನೆಯನ್ನು ನಾವೆಲ್ಲರೂ ಕೃತಜ್ಞತೆಯಿಂದ ನೆನೆಯಬೇಕು.

ಪ್ರಿನ್ಸೆಪ್ ಬ್ರಾಹ್ಮೀಲಿಪಿ ಮಾತ್ರವಲ್ಲದೆ ಖರೋಷ್ಠಿಲಿಪಿಯನ್ನೂ ಗುರುತಿಸಿದರು. ವಾಯುವ್ಯ ಭಾರತದಲ್ಲಿ ಬಳಕೆಯಲ್ಲಿದ್ದ ಈ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು. ಗ್ರೀಕ್ ನಾಣ್ಯಗಳ ಅಧ್ಯಯನ ಈ ಭಾಷೆಯನ್ನು ಅರಿಯಲು ಸಹಾಯಕವಾಯಿತು. ಹೀಗೆ ಭಾರತದ ಎರೆಡು ಪ್ರಾಚೀನ ಭಾಷೆಗಳನ್ನು ಗುರುತಿಸಿ ಅರ್ಥೈಸಿ ಜೇಮ್ಸ್ ಪ್ರಿನ್ಸೆಪ್ ನಮಗೆ ಮಹದುಪಕಾರ ಮಾಡಿದ್ದಾರೆ.

ಜೇಮ್ಸ್ ಪ್ರಿನ್ಸೆಪ್ ಕಾಶಿಯಲ್ಲಿದ್ದ ಹತ್ತು ವರ್ಷಗಳಲ್ಲಿ ಆ ನಗರದ ಉನ್ನತಿಗೂ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಕಾಶಿಯಲ್ಲಿ ಹೊಸ ಟಂಕಸಾಲೆಯನ್ನು ನಿರ್ಮಿಸಿದರು. ಹೊಸ ಚರ್ಚ್ ನ ವಾಸ್ತು ಶಿಲ್ಪವನ್ನು ರೂಪಿಸಿ ನಿರ್ಮಿಸಿದರು. ಒಂದು ಕಮಾನಿನ ಸುರಂಗವನ್ನು ಹೊಸದಾಗಿ ನಿರ್ಮಿಸಿದರು. ಕರಮಾನ್ಸ್ ಎಂಬ ನದಿಯ ಮೇಲೆ ಕಲ್ಲಿನ ಸೇತುವೆಯನ್ನು ನಿರ್ಮಾಣ ಮಾಡಿದರು. ಅಲ್ಲಿ ಒಂದು ಒಳ ಚರಂಡಿಯನ್ನು ನಿರ್ಮಿಸಿದರು. ಅದು ಈಗಲೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಆ ಊರಿನ ಮುಖ್ಯ ಕಟ್ಟಡ, ವಾಸ್ತು ಶಿಲ್ಪ, ದೇವಾಲಯ, ಸರೋವರ, ಸ್ಮಾರಕಗಳನ್ನು ಜಲವರ್ಣದಲ್ಲಿ ಚಿತ್ರಿಸಿದ್ದಾರೆ. ಹೀಗೆ ತಾವು ವಾಸಿಸಿದ್ದ ಸಮುದಾಯದ, ನಗರಕ್ಕೆ ಅಪೂರ್ವ ಕೊಡುಗೆಗಳನ್ನು ನೀಡಿದ್ದಾರೆ.

ಜೇಮ್ಸ್ ಪ್ರಿನ್ಸೆಪ್ ಒಬ್ಬ ಅಸಾಧಾರಣ ಪ್ರತಿಭಾವಂತರು, ಅಸಾಮಾನ್ಯ ಸಾಧಕರು ಆಗಿದ್ದರು. ಆದರೆ ಕೇವಲ ನಲವತ್ತನೆಯ ವಯಸ್ಸಿನಲ್ಲಿ ನಿಧನರಾದರು. ಹ್ಯಾರಿಯೆಟ್ ಸೋಫಿಯಾ ಆಬರ್ಟ್ ಎನ್ನುವವರನ್ನು 1835 ರಲ್ಲಿ ವಿವಾಹವಾದರು. 1837 ರಲ್ಲಿ ಎಲಿಜಾ ಎಂಬ ಮಗಳು ಜನಿಸಿದರು. ಪ್ರಿನ್ಸೆಪ್ ಅವರಿಗೆ ಮೆದುಳಿನ ಮೃದುತ್ವಕ್ಕೆ ಸಂಬಂಧಿಸಿದ ಅಪರೂಪದ ಕಾಯಿಲೆ ಇತ್ತು ಎಂದು ಅಂದಾಜಿಸಲಾಗಿದೆ. ಅವರು ವಿಪರೀತ ಒತ್ತಡದ ಕೆಲಸಗಳಲ್ಲಿ ನಿರಂತರ ನಿರತರಾದರು. ಅದರ ಫಲವಾಗಿ ತೀವ್ರವಾದ ತಲೆನೋವು ಅವರನ್ನು ಕಾಡುತ್ತಿತ್ತು. ಈ ತಲೆನೋವಿನ ಚಿಕಿತ್ಸೆಗಾಗಿ ಇಂಗ್ಲೆಂಡಿಗೆ ತೆರಳಿದರು. ಚಿಕಿತ್ಸೆ ಫಲಕಾರಿಯಾಗದೇ 1840 ರಲ್ಲಿ ಅಲ್ಲಿಯೇ ನಿಧನರಾದರು.

ಜೇಮ್ಸ್ ಪ್ರಿನ್ಸೆಪ್ ಅನೇಕ ಲೇಖನಗಳನ್ನು Journal of Asiatic Society of Bengal ಎನ್ನುವ ತಮ್ಮದೇ ಸಂಪಾದಕತ್ವದ ಪತ್ರಿಕೆಗಾಗಿ ಬರೆದರು. ಇವುಗಳಲ್ಲಿ ಕೆಲವನ್ನು ಸಂಕಲನಗಳಾಗಿ ಪ್ರಕಟಿಸಿದ್ದಾರೆ. ಇದರ ಹೊರತಾಗಿ ಅವರು ಮೂರು ಕೃತಿಗಳನ್ನು ರಚಿಸಿದ್ದಾರೆ.

I. Essays on Indian Antiquities
II. Historic
III. Numismatic and poligraphic

ಇವರು ಶಾಸನ ಜಗತ್ತಿಗೆ ನೀಡಿದ ಕೊಡುಗೆಗಳನ್ನು ಪರಿಗಣಿಸಿ ಕೊಲ್ಕತ್ತಾದಲ್ಲಿ ಹೂಗ್ಲಿನದಿಯ ಸಮೀಪ 'ಪ್ರಿನ್ಸೆಪ್ ಘಾಟ್' ಎನ್ನುವ ಸುಂದರ ಸ್ನಾನ ಘಟ್ಟವನ್ನು ನಿರ್ಮಿಸಿದ್ದಾರೆ. ಇದು 'ವಿದ್ಯಾಸಾಗರ ಸೇತು' ಎಂಬ ಸೇತುವೆಯ ಸಮೀಪ ಇದೆ. ಭಾರತದಲ್ಲಿರುವ ಒಂದು ಸಸ್ಯಕ್ಕೆ ಪಿನ್ಸೆಪಿಯಾ ಎಂದು ಹೆಸರಿಟ್ಟಿದ್ದಾರೆ.

ಜೇಮ್ಸ್ ಪ್ರಿನ್ಸೆಪ್ ಅವರ ವೈಯಕ್ತಿಕ ಜೀವನ ಕಿರಿದಾದರೂ ಅವರ ಮಹಾನ್ ಸಾಧನೆಗಳಿಂದಾಗಿ ಭಾರತೀಯ ವಿದ್ವತ್ ವಲಯ ಅವರನ್ನು ಸದಾ ಸ್ಮರಿಸುತ್ತದೆ. ನಮಗೆ ಇವರು ಪ್ರಾತಃಸ್ಮರಣೀಯರು.

DC & SSLC TOPER TALK
scan to watch video



ಸರ್ಕಾರಿ ಶಾಲೆ, ನಮ್ಮ ಶಾಲೆ
ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಹೆಜ್ಜೆ
(Government school, our school - the first step towards quality education.)

ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಉಚಿತ
FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

12–06–2025 – ಗುರುವಾರ

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೂಲ |
| ಯೋಗ | : ಶುಭ |
| ಕರಣ | : ಕೌಳವ |
| ಸೂರ್ಯೋದಯ | : 05:41:56 |
| ಸೂರ್ಯಾಸ್ತ | : 19:11:52 |
| ರಾಹು ಕಾಲ | : 14:08–15:49 |
| ಯಮಘಂಡ ಕಾಲ | : 05:42–07:23 |
| ಗುಳಿಕ ಕಾಲ | : 09:04–10:46 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 11–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.16 ಅಡಿ |
| ಒಳ ಹರಿವು | 3308 ಕ್ಯುಸೆಕ್ |
| ಹೊರ ಹರಿವು | 185 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 24.441 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1580.90 ಅಡಿ |
| ಒಳ ಹರಿವು | 4924 ಕ್ಯುಸೆಕ್ |
| ಹೊರ ಹರಿವು | 8 ಕ್ಯುಸೆಕ್ |
| ಸಾಮರ್ಥ್ಯ | 4.924 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಗ್ರಾಮ ಮಟ್ಟದಲ್ಲಿ ಧರ್ತಿ ಆಬಾ ಅಭಿಯಾನದ ಜಾಗೃತಿ

## ಜೂ.16 ರಿಂದ 30 ರವರೆಗೆ ಗ್ರಾಮಗಳಲ್ಲಿ ಶಿಬಿರ ಆಯೋಜನೆ | ಫಲಾನುಭವಿಗಳು ಸದುಪಯೋಗಪಡೆದುಕೊಳ್ಳಲು ಡಿಸಿ ಎಂ.ಎಸ್.ದಿವಾಕರ್ ಕರೆ





**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರದ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಗುರಿ ನಮ್ಮದು, ಅದರ ಸದುಪಯೋಗ ಪಡೆದು ಮುಖ್ಯವಾಹಿನಿಗೆ ಬರುವ ಛಲ ಬುಡಕಟ್ಟು ಸಮುದಾಯ ಗಳದ್ದಾಗಲಿ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಜಿಲ್ಲಾಡಳಿತ, ಜಿಪಂ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ಧರ್ತಿ ಅಬಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನ ಕಾರ್ಯಕ್ರಮದಡಿ ಧರ್ತಿ ಆಬಾ ಅಭಿಯಾನ ಜಾಗೃತಿ ಮತ್ತು ಪ್ರಯೋಜನಗಳ ಶಿಬಿರ ಅನುಷ್ಠಾನದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಬುಧವಾರ ಅವರು ಮಾತನಾಡಿದರು, ಜಿಲ್ಲೆಯಲ್ಲಿ ಹೆಚ್ಚು ಪರಿಶಿಷ್ಟ ವರ್ಗಗಳ ಸಮುದಾಯದ ಜನರು ವಾಸಿಸುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅಭಿಯಾನದ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಜೂ.16 ರಿಂದ 30 ರವರೆಗೆ ವಿವಿಧ ಗ್ರಾಮಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಪ್ರಚಾರದ ವಾಹನಗಳ ಮೂಲಕ ಪ್ರಚಾರ ಮಾಡಲಾಗುವುದು. ಅಯಾ ಹಳ್ಳಿಗ ಳಲ್ಲಿಯೇ ಅರ್ಜಿಗಳನ್ನು ಸ್ವೀಕರಿಸಲು ನಮ್ಮ ಅಧಿಕಾರಿಗಳು ನಿಗದಿತ ದಿನಾಂಕಗಳಲ್ಲಿ ಲಭ್ಯವಿರಲಿದ್ದಾರೆ. ಸಮರ್ಪಕ ಸೇವೆ ಪಡೆಯುವಲ್ಲಿ ಫಲಾನುಭವಿಗಳು ಯೋಜನೆಯ ಸದುಪಯೋಗ ಪಡೆದುಕೊಳ್ಳಲಿ. ಅಭಿಯಾನದಡಿ ಗ್ರಾಮ ಮಟ್ಟದ ಶಿಬಿರಗಳಲ್ಲಿ ಆರೋಗ್ಯ, ಆಹಾರ, ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ, ಸಾಮಾಜಿಕ ನ್ಯಾಯ, ಕೃಷಿ, ಭೂಮಾಪನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ಸಂಬಂಧಿಸಿದ ಇಲಾಖೆಗಳೊಂದಿಗೆ ಸಹಯೋಗವನ್ನು ಸಾಧಿಸುವುದರ ಮೂಲಕ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯನ್ನು ನೇಮಿಸಲಾಗಿದೆ.

ಬುಡಕಟ್ಟು ಸಮುದಾಯದವರಿಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳು : ಆಧಾರ ಕಾರ್ಡ್, ರೇಷನ್ ಕಾರ್ಡ್, ಆಯುಷ್ಮಾನ್ ಕಾರ್ಡ್, ಜಾತಿ ಪ್ರಮಾಣ ಪತ್ರ, ನಿವಾಸಿ ಪ್ರಮಾಣ ಪತ್ರ, ಪಿಎಂ ಕಿಸಾನ್ ಕ್ರೆಡಿಟ್ ಕಾರ್ಡ್, ಜನ್ ಧನ್ ಬ್ಯಾಂಕ್ ಖಾತೆ, ವಿಮಾ ಹಕ್ಕುಗಳು (ಪಿಎಂಜೆಜೆಬಿವೈ, ಪಿಎಂಎಸ್ ಬಿವೈ), ಸಾಮಾಜಿಕ ಭದ್ರತಾ ಯೋಜನೆಗಳು ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ, ದಿವ್ಯಾಂಗ ಪಿಂಚಣಿ, ಉದ್ಯೋಗ ಮತ್ತು ಜೀವನೋಪಾಯ ಯೋಜನೆಗಳು ನರೇಗಾ, ಪಿಎಂ ವಿಶ್ವಕರ್ಮ, ಮುದ್ರಾ ಸಾಲಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪಿಎಂ ಮಾತೃ ವಂಧನ ಯೋಜನೆ (ಪಿಎಂಎಂವಿವೈ), ಐಸಿಡಿಎಸ್ ಸೌಲಭ್ಯಗಳು, ಲಸಿಕೆಕರಣ, ಸಿಕೆಲ್ ಸೆಲ್ ಅನಿಮೀಯಾ ಕುರಿತು ಜಾಗೃತಿ ಮೂಡಿಸುವುದು ಮತ್ತು ತಪಾಸಣೆ ಸೇರಿದಂತೆ ವಿವಿಧ ಯೋಜನೆಗಳ ಸ್ಥಳದಲ್ಲಿಯೇ ಪರಿಹರಿಸಲಾಗುವುದು ಎಂದರು.

ಶಿಬಿರ ಹಮ್ಮಿಕೊಳ್ಳುವ ಗ್ರಾಮಗಳ ಮಾಹಿತಿ : ವಿಜಯನಗರ ಜಿಲ್ಲೆಯ ಧರ್ತಿ ಅಬಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನ ಕಾರ್ಯಕ್ರಮದಡಿ ಆಯ್ಕೆಯಾದ ಗ್ರಾಮಗಳಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಜೂ.16 ರಂದು ಹೊಸಪೇಟೆ ತಾಲೂಕಿನ ಚಿಲಕನಹಟ್ಟಿ, ಹೊಸೂರು, ನರಸಾಪುರ ಗ್ರಾಮದಲ್ಲಿ, ಜೂ.17 ರಂದು ಹಗರಿಬೊಮ್ಮನಹಳ್ಳಿ ತಾಲೂಕಿನ ನಾರಾಯಣದೇವರಕೆರೆ ಗ್ರಾಮದಲ್ಲಿ, ಜೂ.18 ರಂದು ಕೂಡ್ಲಿಗಿ ತಾಲೂಕಿನ ಜರ್ಮಲಿ, ಸಿಡಿಗಲ್ಲು, ಹುಲಿಕುಂಟ, ಹುರಡಿಹಳ್ಳಿ ಗ್ರಾಮಗಳಲ್ಲಿ, ಜೂ.19 ರಂದು ಕೂಡ್ಲಿಗಿ ತಾಲೂಕಿನ ಹುರುಳಿಹಾಳು, ಕುಮುತಿ, ಅಡವಿಸೂರನಹಳ್ಳಿ, ನರಸಿಂಹಗಿರಿ, ಜೂ.20 ರಂದು ಕೂಡ್ಲಿಗಿ ತಾಲೂಕಿನ ಯರ್ರನಿಂಗನಹಳ್ಳಿ, ಗಂಡುಬೊಮ್ಮನಹಳ್ಳಿ, ಮೀನುಕೆರೆ, ಚಿರತುಗುಂಡು, ಜೂ.21 ರಂದು ಪಾಲಯನಕೋಟೆ, ಜಮ್ಮೋಬನಹಳ್ಳಿ, ಸೂಲದಹಳ್ಳಿ, ಜೂ.22 ರಂದು ತಿಪ್ಪೆಹಳ್ಳಿ, ನಾಗೇನಹಳ್ಳಿ, ಜೂ.23 ರಂದು ಹರಪನಹಳ್ಳಿ ತಾಲೂಕಿನ ಆನಂತಹಳ್ಳಿ, ನಿಚ್ಚವನಹಳ್ಳಿ, ಜೂ.24 ರಂದು ಹರಪನಹಳ್ಳಿ ತಾಲೂಕಿನ ಕೂಮಾರನಹಳ್ಳಿ, ಕಂಬತ್ರಹಳ್ಳಿ ಗ್ರಾಮಗಳಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಬುಡಕಟ್ಟು ಸಮುದಾಯದ ಅರ್ಹ ಫಲಾನುಭವಿಗಳು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

ಈ ವೇಳೆ ಸಭೆಯಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ರವಿಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಶ್ವೇತಾ, ಅಹಾರ ಇಲಾಖೆ ಉಪನಿರ್ದೇಶಕ ಆರೀಫ್, ಆಯುಷ್ ಇಲಾಖೆಯ ಡಾ.ಮುನಿವಾಸುದೇವ ರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

# ಶಾಸಕ ಡಾ.ಎನ್.ಟಿ.ಶ್ರೀನಿವಾಸ ಮನೆ ಮೇಲೆ ಇಡಿ ದಾಳಿ



**ಹಂಪಿ ಟೈಮ್ಸ್ ಕೂಡ್ಲಿಗಿ**

ಲೋಕಸಭಾ ಚುನಾವಣೆ ವೇಳೆ ವಾಲ್ಮೀಕಿ ನಿಗಮದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಶಾಸಕ ಡಾ. ಶ್ರೀನಿವಾಸ್ ಅವರ ಮನೆಯ ಮೇಲೆ ಬುಧವಾರ ಬೆಳಿಗ್ಗೆ ಜಾರಿ ನಿರ್ದೇನಾಲಯದ (ಇಡಿ) ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ತಾಲ್ಲೂಕಿನ ನರಸಿಂಹಗಿರಿಯಲ್ಲಿರುವ ಶಾಸಕರ ಮನೆಯೊಳಕ್ಕೆ ಇಡಿ ತನಿಖಾ ತಂಡವೊಂದು ಬುಧವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ಪ್ರವೇಶ ಮಾಡಿದ್ದು, ದಾಖಲೆಗಳ ಶೋಧಕಾರ್ಯ ಕೈಗೊಂಡಿದ್ದಾರೆ. ಈ ವೇಳೆ ಮನೆಯಲ್ಲಿ ಶಾಸಕರ ತಾಯಿ ಮಾತ್ರ ಇದ್ದರು. ಒಳಗೆ ಯಾರನ್ನು ಬಿಡದೆ ಮನೆ ಸುತ್ತ ಸಾರ್ವಜನಿಕರ ಪ್ರವೇಶ ನಿರ್ಭಂಧಿಸಲಾಗಿತ್ತು.

ಮಂಗಳವಾರ ಕ್ಷೇತ್ರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ಶಾಸಕರು ಸಂಜೆ ತುಮಕೂರು ಕಡೆ ಹೋಗಿದ್ದರು. ವಿಷಯ ತಿಳಿದ ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಅವರು ಬುಧವಾರ ಮಧ್ಯಾಹ್ನದ ವೇಳೆಗೆ ಮರಳಿ ನರಸಿಂಹಗಿರಿಯಲ್ಲಿನ ತಮ್ಮ ನಿವಾಸಕ್ಕೆ ಬಂದರು. ಈ ವೇಳೆ ಇಡಿ ಅಧಿಕಾರಿಗಳು ಪ್ರಿಂಟರೊಂದನ್ನು ಮನೆಯೊಳಗೆ ತೆಗೆದುಕೊಂಡು ಹೋದರು ಎಂದು ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ. ಈ ದಾಳಿ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ವಾಲ್ಮೀಕಿ ನಿಗಮದ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ದಾಳಿ ನಡೆದಿವೆ ಎನ್ನಲಾಗುತ್ತಿದೆ. ಶಾಸಕರು ಗ್ರಾಮಕ್ಕೆ ಬರುತ್ತಿದ್ದಾರೆ ಎಂದು ತಿಳಿದ ಕಾಂಗ್ರೆಸ್ ಪಕ್ಷದ ಅನೇಕ ಮುಖಂಡರು ಮತ್ತು ಹಿತೈಷಿಗಳು ಎಂದಿನಂತೆ ಶಾಸಕರ ಮನೆ ಬಳಿ ಬಂದು ನಿಂತಿದ್ದರು.

## ಚಿತ್ರ ಸುದ್ದಿ



ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ಕಾರು ಹುಣ್ಣಿಮೆಯ ನಿಮಿತ್ತ ಬುಧವಾರ ಸಂಜೆ ನಡೆದ ಹೋರಿ ಓಟದ ಸ್ಪರ್ಧೆಯಲ್ಲಿ ಗ್ರಾಮದ ಕುರಳಿ ವಾಸಪ್ಪನವರ ಹೋರಿ ಪ್ರಥಮ ಸ್ಥಾನ ಪಡೆಯಿತು. ಕರಿ ಹರಿದ ಹೋರಿ ಯಜಮಾನನಿಗೆ ಗ್ರಾಮದ ಶ್ರೀ ಸಾಯಿ ಯುವಕರ ಸಂಘ (ರಿ) ವತಿಯಿಂದದೇಣಿಗೆ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಸದಸ್ಯರು ಇತರರಿದ್ದರು.

# ಅಂತರಾಷ್ಟ್ರೀಯ ಯೋಗ ದಿನಾಚರಣೆ; ಜೂ.13 ರಂದು ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಕೇಂದ್ರದಲ್ಲಿ ಜೂ.21 ರಂದು 11 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವ ಕುರಿತು ಜಿಲ್ಲಾಧಿಕಾರಿ ಯವರ ಅಧ್ಯಕ್ಷತೆಯಲ್ಲಿ ಜೂ.13 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಎಂ.ವಿರುಪಾಕ್ಷ ಅವರು ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ರಿಯಾಯಿತಿ ದರದಲ್ಲಿ ಪುಸ್ತಕ ಲಭ್ಯ

**ಹಂಪಿ ಟೈಮ್ಸ್ ಬಳ್ಳಾರಿ**

ಪತ್ರಿಕೋದ್ಯಮಕ್ಕೆ ಹಾಗೂ ಮಾಧ್ಯಮ ಜಗತ್ತಿಗೆ ಸಂಬಂಧಿಸಿದ 40 ಕ್ಕೂ ಹೆಚ್ಚು ಪುಸ್ತಕಗಳು ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯವಿದ್ದು, ಆಸಕ್ತರು, ವಿಶೇಷವಾಗಿ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯೇಶಾ ಖಾನಂ ಅವರು ತಿಳಿಸಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿಯು ಕೆಲವು ದಶಕಗಳಿಂದ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದು, ಮಾರಾಟಕ್ಕೆ ಲಭ್ಯವಿವೆ. ಹಿರಿಯ ಪತ್ರಕರ್ತರು, ಪರಿಣತರು ಬರೆದಿರುವ ಈ ಪುಸ್ತಕಗಳು ಯುವ ಪತ್ರಕರ್ತರು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗಿವೆ. ಈ ಪುಸ್ತಕಗಳ ಮೇಲೆ ಶೇ. 20 ರ ವರೆಗೆ ರಿಯಾಯಿತಿಯೂ ನೀಡಲಾಗುತ್ತಿದೆ. ಆಸಕ್ತರು ಪುಸ್ತಕಗಳ ಕುರಿತ ಮಾಹಿತಿಯನ್ನು ಎಕ್ಸ್, ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್ ಗಳಲ್ಲಿನ ಅಕಾಡೆಮಿಯ ಖಾತೆ @ karmediaacademy/ Karnataka Media Academy ಗಳಲ್ಲಿ ಪಡೆಯಬಹುದಾಗಿದೆ.

ಆಸಕ್ತರು, ಪತ್ರಿಕೋದ್ಯಮ ಬೋಧಿಸುವ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಸಗಟು ಖರೀದಿ ಮಾಡಲು ಬಯಸುವವರು ಅಕಾಡೆಮಿಯ ಕಚೇರಿ ದೂ. 080 22860264 ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

### ಪ್ರಿಂಟಿಗ್ ಪ್ರೆಸ್ ಮಾಲೀಕರು ಕಡ್ಡಾಯವಾಗಿ ಮಾಹಿತಿ ನಮೂದಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಪ್ರಿಂಟಿಂಗ್ ಪ್ರೆಸ್ ಮತ್ತು ಮೇದಾರ್ ಮಾಲೀಕರು ಕಡ್ಡಾಯವಾಗಿ ತಾವು ಮುದ್ರಿಸುವ ಬ್ಯಾನರ್, ಫ್ಲೆಕ್ಸ್, ಬಂಟಿಂಗ್ಸ್‌ಗಳಿಗೆ ತಮ್ಮ ಒಡೆಯತನದ ಗುರುತು, ಚಿಹ್ನೆ(ಸಿಂಬಲ್) ನಮೂದಿಸಬೇಕು. ಇಲ್ಲವಾದಲ್ಲಿ ದಂಡವಿಧಿಸಿ ಕಾನೂನು ಕ್ರಮಜರುಗಿಸಲಾಗುವುದು ಎಂದು ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಜೆಪಿ ಇಡಿ ಸಿಬಿಐ ಬಿಟ್ಟು ಹೆದರಿಸುತ್ತಿದೆ

## ಕೆಪಿಸಿಸಿ ವಕ್ತಾರ ಪತ್ರೇಶ್ ಹಿರೇಮಠ್ ಕಿಡಿ | ಕೈ ಶಾಸಕರು, ಸಂಸದರೆ ಟಾರ್ಗೆಟ್

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಸಚಿವ ನಾಗೇಂದ್ರ, ಸಂಸದ ತುಕಾರಾಂ, ಶಾಸಕರಾದ ಗಣೇಶ್, ಭರತರೆಡ್ಡಿ, ಎನ್ ಟಿ ಶ್ರೀನಿವಾಸ್ ಭಾಗಿಯಾಗಿರುವ ಬಗ್ಗೆ ಯಾವ ದಾಖಲೆ ಮತ್ತು ಸಾಕ್ಷ್ಯವೂ ಇಲ್ಲದಿದ್ದರೂ ಕೂಡಾ ಕೇಂದ್ರದ ಬಿಜೆಪಿ ಸರ್ಕಾರ ಇಡಿ ಮತ್ತು ಸಿಬಿಐ ಬಳಸಿ ಮನೆ ಕಛೇರಿ ಮೇಲೆ ದಾಳಿ ನಡೆಸುವ ಮೂಲಕ ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳಿಸುವ ಹಾಗೂ ಜನಪ್ರತಿನಿಧಿಗಳನ್ನು ಬೆದರಿಸುವ ಪ್ರಜಾತಂತ್ರ ವಿರೋಧಿ ಕಾರ್ಯ ನಡೆಸುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ವಕ್ತಾರ ಪತ್ರೇಶ್ ಹಿರೇಮಠ್ ಕಿಡಿಕಾರಿದ್ದಾರೆ.

ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಈಗಾಗಲೇ ರಾಜ್ಯದ ತನಿಖಾ ಸಂಸ್ಥೆ ಕ್ಲೀನ್ ಚಿಟ್ ನೀಡಿದ್ದರೂ ದುರುದ್ದೇಶ ಪೂರ್ವಕವಾಗಿ ಕಾಂಗ್ರೆಸ್ ನಾಯಕರ ಮೇಲೆ ದಾಳಿ ನಡೆಸುತ್ತಿರುವುದು ಸೇಡಿನ ರಾಜಕಾರಣವಾಗಿದ್ದು ಸಂವಿಧಾನ ವಿರೋಧಿ ಕೃತ್ಯವಾಗಿದೆ ಎಂದು ಪತ್ರೇಶ್ ಕೇಂದ್ರದ ವಿರುದ್ಧ ಹರಿಹಾಯ್ದರು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಚೆಕ್ ಮೂಲಕ ಲಂಚ, ಕೋವಿಡ್ ಖರೀದಿ ಹಗರಣ, ಗುತ್ತಿಗೆದಾ ರರಿಂದ ಲಂಚ ಸೇರಿ ನೂರಾರು ಹಗರಣ ನಡೆಸಿರುವ ಅನೇಕ ದಾಖಲೆಗಳು ಕಣ್ಣೆದುರಿ ಗಿದ್ದರೂ ಭ್ರಷ್ಟಾಚಾರ ನಡೆಸಿದ ಒಬ್ಬೇ ಒಬ್ಬ ಬಿಜೆಪಿ ನಾಯಕರ ಮೇಲೆ ಇಡಿ ಸಿಬಿಐ ದಾಳಿ ನಡೆಸುತ್ತಿಲ್ಲವೇಕೆ ಎಂದು ಪತ್ರೇಶ್ ಪ್ರಶ್ನಿಸಿದ್ದಾರೆ.

# ಪುಸ್ತಕ ಬಹುಮಾನಕ್ಕಾಗಿ ಜಾನಪದ ಕೃತಿಗಳ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಜಾನಪದ ಅಕಾಡೆಮಿಯು 2024 ನೇ ಸಾಲಿನಲ್ಲಿ 01–01–2024 ರಿಂದ 31–12–2024 ರ ವರೆಗೆ ಪ್ರಥಮ ಆವೃತ್ತಿಯಲ್ಲಿ ಮುದ್ರಣಗೊಂಡಿರುವ (ತಾಂತ್ರಿಕ ಹಾಗೂ ಪೂರ್ವಭಾವಿ ಪುಟಗಳನ್ನು ಹೊರತುಪಡಿಸಿ) ಕನಿಷ್ಠ 150 ಪುಟಗಳಿಗೂ ಮೇಲ್ಪಟ್ಟಿರುವಂತೆ, ವಿವಿಧ ನಾಲ್ಕು ಪ್ರಕಾರಗಳ ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯಡಿ ಜಾನಪದ ಕೃತಿಗಳನ್ನು ಪುಸ್ತಕ ಬಹುಮಾನಕ್ಕಾಗಿ ಆಹ್ವಾನಿಸಿದೆ.

ಲೇಖಕರು, ಪ್ರಕಾಶಕರು, ಸಂಪಾದಕರು ತಮ್ಮ 1 ಕೃತಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002 ಇವರಿಗೆ ಜೂನ್ 30 ರೊಳಗೆ ತಲುಪುವಂತೆ ಖುದ್ದಾಗಿ, ಕೊರಿಯರ್ ಅಥವಾ ಅಂಚೆ ಮೂಲಕ ಕಳುಹಿಸಿಕೊಡಬಹುದು.

ಈ ಪುಸ್ತಕವು ತಜ್ಞರಿಂದ ಪ್ರಕಾರವಾರು ಆಯ್ಕೆಯಾದಲ್ಲಿ ನಂತರ ಪುಸ್ತಕ ಬಹುಮಾನಕ್ಕೆ ಲೇಖಕರಿಂದ ಉಳಿದಂತೆ 03 ಪ್ರತಿಗಳನ್ನು ಮೌಲ್ಯಮಾಪಕರ ಪರಿಶೀಲನೆಗೆ ತರಿಸಿಕೊಳ್ಳಲಾಗುವುದು.

**ವಿವಿಧ ಪ್ರಕಾರಗಳ ವಿವರ:** ಜನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ–ವಿಮರ್ಶೆ– ಸಂಶೋಧನೆ ಮತ್ತು ಜನಪದ ಸಂಕೀರ್ಣ.

ಈಗಾಗಲೇ ಪುಸ್ತಕ ಬಹುಮಾನ ಪಡೆದ ಸಂಪಾದಕರು, ಲೇಖಕರು ಪುನಃ ಪುಸ್ತಕ ಬಹುಮಾನ ಯೋಜನೆಗೆ ಕೃತಿಗಳನ್ನು ಕಳುಹಿಸಬಾರದಾಗಿ ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನ ಜೆ.ಸಿ ರಸ್ತೆಯ ಕನ್ನಡ ಭವನದ 2 ನೇ ಮಹಡಿಯ ಕರ್ನಾಟಕ ಜಾನಪದ ಅಕಾಡೆಮಿ ಕಚೇರಿ ಅಥವಾ ದೂ.080– 22215509 ಗೆ ಸಂಪರ್ಕಿಸಬಹುದು ಎಂದು ತಿಳಿಸಿದೆ.

# ಜೂ.13 ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ:** ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 110/11 ಕೆ.ವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ತ್ರೈಮಾಸಿಕ ನಿರ್ವಹಣೆ ಕೈಗೊಳ್ಳುತ್ತಿ ರುವುದರಿಂದ ಜೂ.13 ರಂದು ಬೆಳಿಗ್ಗೆ 08 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಎಫ್–23, ಎಫ್–24, ಎಫ್–25, ಎಫ್–46, ಎಫ್–47 ಮತ್ತು ಎಫ್–48 ಫೀಡರ್‌ಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾ ಗಲಿದೆ ಎಂದು ಸಹಾಯಕ ಕಾರ್ಯನಿ ರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:** ಬಳ್ಳಾರಿ ನಗರದ ಬೆಂಗಳೂರು ರಸ್ತೆ, ಅಂಧ್ರಾಳ್ ರಸ್ತೆ, ಕೊಲ್ಮಿ ಚೌಕ್, ಕಾರ್ಕಲ ತೋಟ, ಬಾಪೂಜಿ ನಗರ, ಮಿಲ್ಲರ ಪೇಟೆ, ಮೋತಿ ವೃತ್ತ, ತೇರು ಬೀದಿ, ಇತರೆಡೆಗಳಲ್ಲಿ ವ್ಯತ್ಯಯವಾಗಲಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
Searching for the perfect platform to promote your brand?
Want to reach more people?
Choose HAMPI TIMES



Scan to read epaper
HAMPI TIMES
Kannada Daily News paper
Print & Digital Edition
Contact : 94486 33038
E-mail: hampitimes@gmail.com
www.hampitimes.com